




ಕರ್ನಾಟಕ ಸರ್ಕಾರ





ಕನ್ನಡ ಪುಸ್ತಕ ಪ್ರಾಧಿಕಾರ



2013ನೇ ಸಾಲಿನ ವಾರ್ಷಿಕ ಪುಸ್ತಕ ಸೂಚಿ




ಕ್ರ. ಸಂ.	ಪುಸ್ತಕ ಸಂಖ್ಯೆ	ಪುಸ್ತಕದ ಹೆಸರು	ಪ್ರಕಾರ	ಲೇಖಕರ ಹೆಸರು ಶ್ರೀಮತಿ:ಶ್ರೀ	ಪ್ರಕಾಶಕರ ಹೆಸರು	ಪುಟ ಸಂಖ್ಯೆ	ಬೆಲೆ	ಅಭಿಪ್ರಾಯ	
1.	1.	ಶರಣರ ॥ ಕಾವ್ಯಾಮೃತ॥	ಕಾವ್ಯ	ಶಾಂತಾ ವ್ಹಿ.ಜೋಗೆನ್ನವರ ವಿಜಾಪೂರ	ಶ್ರೀಮತಿ ಶಾಂತಾ ವ್ಹಿ. ಜೋಗೆನ್ನವರ ಕೇರಾಫ್ : ಎಮ್.ಆರ್. ಕಾಗಲಕರ, ಜೋರಾಪೂರಪೇಠ ಹೊಸ ಕುಂಬಾರಗಲ್ಲಿ, ವಿಜಾಪುರ (7411112852 / 9538196633)	140	80	ಐವತ್ತೂರು ಮಂದಿ ಶಿವಶರಣರ ಜೀವನ ಸಾಧನೆಯನ್ನು ಕಾವ್ಯರೂಪದಲ್ಲಿ ಕಟ್ಟಿಕೊಡುತ್ತದೆ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದ ಪ್ರಸಿದ್ಧರು, ಶರಣ ಬಾಚಯ್ಯ, ಮೈದುನ ರಾಮಯ್ಯ, ಏಲೇಶ್ವರ ಕೇತಯ್ಯ ಮೊದಲಾದ ಅಪ್ರಸಿದ್ಧರ ಬಗೆಗೆ ಸಂಕ್ಷಿಪ್ತ ವಿವರಗಳು ಇಲ್ಲಿವೆ. ಸರಳ ಭಾಷೆಯಲ್ಲಿ ಶಿವತತ್ವದ ಪರಿಚಯವಾಗುತ್ತದೆ.	
2.	2.	ಅನನ್ಯ ಕಲಾಸಾರಥಿ ನಂಜುಂಡರಾವ್	ವ್ಯಕ್ತಿಚಿತ್ರ	ನಂ. ನಾಗಲಕ್ಷ್ಮಿ ಬೆಂಗಳೂರು	ಪ್ರೊ. ಎಂ.ಎಸ್. ನಂಜುಂಡರಾವ್ ಮೆಮೋರಿಯಲ್ ಚಾರಿಟಬಲ್ ಟ್ರಸ್ಟ್ (ರಿ.), 22/1, ಸ್ವಸ್ತಿ, ವೆಸ್ಟ್ ಪಾರ್ಕ್ ರಸ್ತೆ, 10ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 003	217	475	ಕರ್ನಾಟಕ ಚಿತ್ರಕಲಾ ಪರಿಷತ್ತಿನ ಶಿಲ್ಪಿ ಎಂದೇ ಖ್ಯಾತರಾಗಿರುವ, ಸ್ವತಃ ಕಲಾವಿದರೂ, ಖಾದಿ ಗ್ರಾಮೋದ್ಯೋಗ ಮಂಡಳಿಯ ಶ್ರೇಯಸ್ಸಿಗೆ ದುಡಿದವರೂ ಆದ ಶ್ರೀ ಎಂ.ಎಸ್. ನಂಜುಂಡರಾವ್ ಅವರ ಜೀವನ ಮತ್ತು ಸಾಧನೆಯನ್ನು ಪರಿಚಯಿಸಿಕೊಡುವ ಕೃತಿ. ಆಕರ್ಷಕ ವಿನ್ಯಾಸದಲ್ಲಿ ವಿಶಿಷ್ಟ ಛಾಯಾಚಿತ್ರಗಳು, ಗಣ್ಯವ್ಯಕ್ತಿಗಳ ಅನಿಸಿಕೆಗಳನ್ನು ಅವರದೇ ಮಾತುಗಳಲ್ಲಿ ಒಳಗೊಂಡ, ವಿಶಿಷ್ಟ ಕೃತಿ ಇದಾಗಿದೆ.	
3.	4.	ಸುರಪುರ ತಾಲೂಕಿನ ಪ್ರೇಕ್ಷಣೀಯ ಸ್ಥಳಗಳು	ಕ್ಷೇತ್ರ ಪರಿಚಯ	ರಾಜಗೋಪಾಲ ಎಮ್. ವಿಭೂತಿ ಸುರಪುರ	ಗಂಜ ವರ್ತಕರ ಸಂಘ ಎ.ಪಿ.ಎಂ.ಸಿ. ಸಬ್‌ಯಾರ್ಡ್, ಖಾನಾಪುರ, ಸುರಪುರ–585224, ಯಾದಗಿರಿ ಜಿಲ್ಲೆ (9448193300)	82	100	ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಸಂಕ್ಷಿಪ್ತ ದರ್ಶಿನಿ; ಅಲ್ಲಿನ ಪ್ರಾಕೃತಿಕ, ಧಾರ್ಮಿಕ ಹಾಗೂ ಚಾರಿತ್ರಿಕ ವಿಶೇಷಗಳನ್ನು, ಸ್ಥಳಗಳನ್ನು ಚಿತ್ರಸಮೇತ ಪರಿಚಯಿಸುತ್ತದೆ. ಪುಟಕ್ಕೊಂದು ವರ್ಣಚಿತ್ರ, ಆರ್ಟ್ ಪೇಪರಿನ ಮೇಲೆ ಮುದ್ರಣ; ಸುಂದರ ವಿನ್ಯಾಸ, ಪ್ರವಾಸಿಗರ ಕೈಪಿಡಿ ಎನ್ನಬಹುದು.	
4.	5.	ಋಭುಗಳು (ದೈವೀ ಶಿಲ್ಪಗಳು) 2013	ವಿಚಾರ	ಆರ್.ಎಲ್. ಕಶ್ಯಪ, ಬೆಂಗಳೂರು	ಶ್ರೀ ಅರೋಬಿಂದೊ ಕಪಾಲಿ ಶಾಸ್ತ್ರಿ ವೇದ ಸಂಸ್ಕೃತಿ ಸಂಸ್ಥೆ, ನಂ.63, 13ನೇ ಮೇನ್, 4ನೇ ಬ್ಲಾಕ್, ಜಯನಗರ, ಪೂರ್ವ, ಬೆಂಗಳೂರು–560 011 (080–22456315 / 9008833886)54	54	25	ಋಗ್ವೇದದ ಒಂದುನೂರು ಮಂತ್ರಗಳು, ಅವುಗಳ ಪಠ್ಯ, ಅನುವಾದ, ಅಂತರಾರ್ಥಗಳ ಈ ಪುಸ್ತಕದಲ್ಲಿದೆ. ದೇವಾಲಯಗಳ ನಿರ್ಮಾಣದಲ್ಲಿ ಹಾಗೂ ದೇವತಾ ಪ್ರತಿಷ್ಠಾಪನ ಸಂದರ್ಭಗಳಲ್ಲಿ ಪಠಿಸುವ ಮಂತ್ರಗಳು ಇವಾಗಿವೆ. ಹತ್ತು ಅಧ್ಯಾಯಗಳಿದ್ದು, ಋಷಿಮುನಿಗಳ ಹೆಸರಿನಲ್ಲಿ ಈ ಅಧ್ಯಾಯಗಳನ್ನು ವಿಭಜಿಸಲಾಗಿದೆ.	



5.	6.	ವೇದ ಗಣಿತ ಪ್ರವೇಶಿಕೆ	ಜ್ಞಾನ ವಿಜ್ಞಾನ	ವಿಶ್ವನಾಥ ಉಣಕಲ್‌ಕರ್	ಶ್ರೀ ಅರೋಬಿಂದೊ ಕಪಾಲಿ ಶಾಸ್ತ್ರಿ ವೇದ ಸಂಸ್ಕೃತಿ ಸಂಸ್ಥೆ, ನಂ.63, 13ನೇ ಮೇನ್, 4ನೇ ಬ್ಲಾಕ್, ಜಯನಗರ, ಪೂರ್ವ, ಬೆಂಗಳೂರು–560 011 (080–22456315 / 9008833886)	167	150	ಹೆಸರಿಗೆ ತಕ್ಕಂತೆ ವೇದಗಣಿತದ ಪ್ರವೇಶಿಕೆಯಂತಿರುವ ಅಪರೂಪದ ಪುಸ್ತಕಗಳಲ್ಲಿ ಒಂದು. ವಿಷಯವನ್ನು ವ್ಯವಸ್ಥಿತ ರೀತಿಯಲ್ಲಿ ಪ್ರಸ್ತುತಪಡಿಸಲಾಗಿದೆ. ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಉಪಯುಕ್ತವಾದದ್ದು, ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಉಪಯುಕ್ತ.	
6.	7.	ಋಗ್ವೇದ ಶಬ್ದಾರ್ಥ ವಿಚಾರ	ವಿಚಾರ	ಆರ್.ಎಲ್. ಕಶ್ಯಪ, ಬೆಂಗಳೂರು	ಶ್ರೀ ಅರೋಬಿಂದೊ ಕಪಾಲಿ ಶಾಸ್ತ್ರಿ ವೇದ ಸಂಸ್ಕೃತಿ ಸಂಸ್ಥೆ, ನಂ.63, 13ನೇ ಮೇನ್, 4ನೇ ಬ್ಲಾಕ್, ಜಯನಗರ, ಪೂರ್ವ, ಬೆಂಗಳೂರು–560 011 (080–22456315 / 9008833886)	228	200	ವೈಚಾರಿಕ ಸಾಹಿತ್ಯದಲ್ಲಿ ಆಸಕ್ತರಾದವರಿಗೆ ನೆರವಾಗುವ ಉದ್ದೇಶದಿಂದ ರಚನೆಯಾದ ಕೃತಿ ಇದು. ವೇದಗಳಲ್ಲಿ ಬರುವ ಶಬ್ದಗಳಲ್ಲಿ ಪ್ರತಿಯೊಂದರ ಬಗ್ಗೆಯೂ ಮಾಡಿರುವ ವರ್ಣನೆಯನ್ನು ಈ ಪುಸ್ತಕದಲ್ಲಿ ಕಾಣಬಹುದು. ಸುಮಾರು 500 ಶಬ್ದಗಳನ್ನು ಹತ್ತು ಅಧ್ಯಾಯಗಳಲ್ಲಿ ವಿಂಗಡಿಸಿ ವಿವರಿಸಲಾಗಿದೆ. ಒಂದು ಅಧ್ಯಾಯದಲ್ಲಿ ಅರವತ್ತು ಪದವರ್ಗಗಳನ್ನು ಕುರಿತು ವಿವರವಾದ ಚರ್ಚೆಯಿದೆ. ಘಟನೆಗಳ ಮತ್ತು ಯಜ್ಞದ ಸಾಂಕೇತಿಕತೆಯನ್ನು ವಿವರವಾಗಿ ವಿವರಿಸಲಾಗಿದೆ. ಶಬ್ದಗಳ ಬಾಹ್ಯಾರ್ಥವನ್ನೂ ಸಾಂಕೇತಿಕಾರ್ಥವನ್ನೂ ವಿವರಿಸಲಾಗಿದೆ.	
7.	8.	ಋಗ್ವೇದ ಸಂಹಿತೆ ಮಂಡಲ: 3	ವಿಚಾರ	ಆರ್.ಎಲ್. ಕಶ್ಯಪ, ಬೆಂಗಳೂರು	ಶ್ರೀ ಅರೋಬಿಂದೊ ಕಪಾಲಿ ಶಾಸ್ತ್ರಿ ವೇದ ಸಂಸ್ಕೃತಿ ಸಂಸ್ಥೆ, ನಂ.63, 13ನೇ ಮೇನ್, 4ನೇ ಬ್ಲಾಕ್, ಜಯನಗರ, ಪೂರ್ವ, ಬೆಂಗಳೂರು–560 011 (080–22456315 / 9008833886)	281	250	ಋಗ್ವೇದದ ತೃತೀಯ ಮಂಡಲದ ಎಲ್ಲಾ 617 ಸೂಕ್ತಗಳಲ್ಲಿ ವಿವರಿಸಿರುವ ಗ್ರಂಥ ಇದಾಗಿದೆ. ಮಂತ್ರಗಳ ಮೂಲ ಪಠ್ಯ, ಅರ್ಥವಿವರಣೆ, ಅನುವಾದದ ಜೊತೆಗೆ ಉಚ್ಚಾರಣಾ ನಿರ್ದೇಶನಕೂಡ ಇದೆ. ಮಂತ್ರ, ಛಂದಸ್ಸು, ಋಷಿಗಳು, ದೇವತೆಗಳ ಸಾಮರ್ಥ್ಯವನ್ನೂ ಒಳಗೊಂಡಂತೆ ಹಲವಾರು ಕುತೂಹಲಕಾರಿ ಅಂಶಗಳ ಪಕ್ಷಿನೋಟ ಇಲ್ಲಿದೆ.	
8.	9.	ವ್ಯಕ್ತಿ ಹಾಗೂ ಸಮುದಾಯಗಳ ಪ್ರಗತಿ	ವಿಚಾರ	ಆರ್.ಎಲ್. ಕಶ್ಯಪ, ಬೆಂಗಳೂರು	ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ, ನಂ.63, 13ನೇ ಮೇನ್, 4ನೇ ಬ್ಲಾಕ್, ಜಯನಗರ ಪೂರ್ವ, ಬೆಂಗಳೂರು–560011 (080–22456315 / 9008833886)	76	10	ಪ್ರಗತಿಯ ವಿವಿಧ ಲಕ್ಷಣಗಳನ್ನು ಕುರಿತ ಹದಿನೈದು ಅಧ್ಯಾಯಗಳಿವೆ. ಆರಂಭದ ಅಧ್ಯಾಯಗಳಲ್ಲಿ ಜಗತ್ತು ಸಾಧಿಸಿರುವ ಪ್ರಗತಿಯ ಅಂಕಿ ಅಂಶಗಳ ವಿವರಗಳಿವೆ. ವಿವಿಧ ದೇಶಗಳ ಒಟ್ಟಾರೆ ಜನಜೀವನದ ಬಗೆಗೆ ವೈವಿಧ್ಯಮಯ ಮಾಹಿತಿ ಲಭ್ಯವಿದೆ. ಮುಂವರಿಸುವ ಭಾರತದ ಆಹಾರ ಉತ್ಪಾದನೆ, ಗ್ರಾಮೀಣ ಮತ್ತು ನಗರ ಪ್ರದೇಶಗಳ ಪ್ರಗತಿಯ ಅಂತರ, ಕೃಷಿ ಸಮಸ್ಯೆ ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ. ಕೊನೆಯ ಹಂತದ ಅಧ್ಯಾಯಗಳಲ್ಲಿ ವ್ಯಕ್ತಿಗತ ನೆಲೆಯಲ್ಲಿ ಸಾಧಿಸಬೇಕಾದ ಪ್ರಗತಿ ಹಾಗೂ ಭಾರತೀಯ ಧಾರ್ಮಿಕ ಬದುಕಿಗೆ ಸಂಬಂಧಿಸಿದ ವಿಷಯ ಕುರಿತ ಸಂಕ್ಷಿಪ್ತ ಚರ್ಚೆ ಇದೆ. ಎಚ್ಚರದ ಓದಿಗೆ ಪ್ರಗತಿಯು ಪ್ರಾಥಮಿಕ ತಿಳಿವಳಿಗೆ ಲಭ್ಯವಾಗುತ್ತದೆ.	


9.	10.	ಶ್ರೀ ಅರವಿಂದರ ಮಹಾಕಾವ್ಯ ಸಾವಿತ್ರಿ ಕಿರುಪರಿಚಯ	ವಿಮರ್ಶೆ	ಉ.ಕಾ.ಸುಬ್ಬರಾಯಾಚಾರ್	ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ, ನಂ.63, 13ನೇ ಮೇನ್, 4ನೇ ಬ್ಲಾಕ್, ಜಯನಗರ ಪೂರ್ವ, ಬೆಂಗಳೂರು–560011 (080–22456315 / 9008833886)	84	20	ಆಧ್ಯಾತ್ಮ ಸಾಧಕ, ಕವಿ, ತತ್ವಜ್ಞಾನಿ ಶ್ರೀ ಅರವಿಂದರ ಮಹಾಕಾವ್ಯವಾದ 'ಸಾವಿತ್ರಿ'ಯನ್ನು ಕನ್ನಡ ಓದುಗರಿಗೆ ಪರಿಚಯಿಸುವ ದೃಷ್ಟಿಯಿಂದ ರಚನೆಯಾದ ಪುಸ್ತಕ. ಮಹಾಭಾರತದ ಅರಣ್ಯ ಪರ್ವದಲ್ಲಿ ಬರುವ ಸಾವಿತ್ರಿ ಉಪಾಖ್ಯಾನವೆಂಬ ಬೀಜಾಣುವನ್ನು ಮಹಾಕಾವ್ಯದ ವಿಸ್ತಾರ ಮತ್ತು ಮಹತ್ತಿಗೆ ಏರಿಸಿದ್ದು ಅರವಿಂದರ ಪ್ರತಿಭೆ. ಈ ಕಾವ್ಯದ ಸ್ವರೂಪ, ಆಶಯ, ಕಥಾಸಾರ, ತತ್ವದೃಷ್ಟಿಯನ್ನು ಇಲ್ಲಿ ಸಮರ್ಥವಾಗಿ ಕೊಡಲಾಗಿದೆ.	
10.	11.	ಕಾಸು ಪಣಂ ದುಡ್ಡು	ವಿಚಾರ	ರಾಜೇಶ್ ಶೆಟ್ಟಿ	ಸಾವಣ್ಣ ಎಂಟರ್ ಪ್ರೈಸಸ್ (ಎ ಯುನಿಟ್ ಆಫ್. ಐ.ಪಿ.ಎಸ್) ನಂ.57, 1ನೇ ಮಹಡಿ, ಪುಟ್ಟಣ್ಣ ರಸ್ತೆ, ಬಸವನಗುಡಿ, ಬೆಂಗಳೂರು–560 004 (8026607011 / 9845224979)	136	125	ವಿಚಾರ ಮತ್ತು ವಾಣಿಜ್ಯದ ಸಂಗಮದಂತಿದೆ. ಈ ಪುಸ್ತಕ ಚೆನ್ನಾಗಿ ಓದಿ, ಕಷ್ಟಪಟ್ಟು ದುಡೀರಿ, ಉಳಿತಾಯ ಮಾಡಿ, ಮ್ಯೂಚುವಲ್ ಫಂಡ್‌ಗೆ ಹಣ ಹೂಡಿ, ಹತ್ತು ವರ್ಷದಲ್ಲಿ ಹಣ ಡಬಲ್ ಮಾಡಿ ಆರಕ್ಕೇರದೇ ಮೂರಕ್ಕಿಳಿಯದೇ ಹಾಯಾಗಿರಿ, ಇನ್ಸೂರೆನ್ಸ್ ಮಾಡಿಸ್ಕೊಂಡು ನಿಟ್ಟುಸಿರು ಬಿಡಿ, ಪಾಸ್‌ಬುಕ್ ನೋಡ್ಕೊಂಡು ನಿದ್ದೆ ಮಾಡಿ, ಸಂಬಳ ಜಾಸ್ತಿ ಆದ್ರೆ ಸಂತೋಷಪಡಿ, ದುಡ್ಡೇದೊಡ್ಡಪ್ಪ – ಇದು ಈ ಪುಸ್ತಕದ ಬೆನ್ನುಡಿಯ ಘೋಷಣೆ.	
11.	12.	ಗ್ರೇಟ್ ಥಾಟ್ಸ್	ವಿಚಾರ	ಯು.ಎಸ್. ಮೊಯಿನುದ್ದೀನ್	ಸಾವಣ್ಣ ಎಂಟರ್ ಪ್ರೈಸಸ್ (ಎ ಯುನಿಟ್ ಆಫ್. ಐ.ಪಿ.ಎಸ್) ನಂ.57, 1ನೇ ಮಹಡಿ, ಪುಟ್ಟಣ್ಣ ರಸ್ತೆ, ಬಸವನಗುಡಿ, ಬೆಂಗಳೂರು–560 004 (8026607011 / 9845224979)	164	150	ಮನೋವಿಕಾಸ, ವ್ಯಕ್ತಿತ್ವವಿಕಾಸ ಹಾಗೂ ಜೀವನ ವಿಕಾಸಕ್ಕೆ ಅಗತ್ಯ ಸ್ಫೂರ್ತಿ ನೀಡುವ ಪ್ರಸಂಗಗಳು, ವಿಚಾರಗಳು ಈ ಕೃತಿಯಲ್ಲಿ ಲಭ್ಯ. ಮಹತ್ವಾಕಾಂಕ್ಷೆಗಳನ್ನು ತುಂಬಿಕೊಂಡು ಸಾಧನೆಯ ಪಥದಲ್ಲಿ ಮುನ್ನಡೆಯ ಬಯಸುವವರು ಅಗತ್ಯ ಪ್ರೇರಣೆ ಪಡೆಯಬಹುದು	
12.	13.	ಐ ಆ್ಯಮ್ ಅನದರ್ ಯೂ.	ವಿಚಾರ	ಪ್ರಿಯಾ ಕುಮಾರ್	ಸಾವಣ್ಣ ಎಂಟರ್ ಪ್ರೈಸಸ್ (ಎ ಯುನಿಟ್ ಆಫ್. ಐ.ಪಿ.ಎಸ್) ನಂ.57, 1ನೇ ಮಹಡಿ, ಪುಟ್ಟಣ್ಣ ರಸ್ತೆ, ಬಸವನಗುಡಿ, ಬೆಂಗಳೂರು–560 004 (8026607011 / 9845224979)	172	150	ಹನ್ನೊಂದು ವೈಚಾರಿಕ ಲೇಖನಗಳ ಸಂಕಲನ, ವ್ಯಕ್ತಿತ್ವ ವಿಕಾಸದ ಪರಿಕಲ್ಪನೆಯ ಅಡಿಯಲ್ಲಿ ರಚನೆಯಾದ ಲೇಖನಗಳಿವು. ಹಲವು ಪಾಠಗಳು, ಹಲವು ಸತ್ಯಗಳು, ಹಲವು ಒಳನೋಟಗಳಿಂದ ಈ ಪುಸ್ತಕ ಸಮೃದ್ಧವಾಗಿದೆ ಎಂದು ಅನುವಾದಕರ ವಿಶ್ವಾಸದ ಮಾತು.	
13.	14.	ಉಪ್ಪಿಗಿಂತ ರುಚಿ ಬೇರೆ ಇಲ್ಲ	ವ್ಯಕ್ತಿ ಚಿತ್ರ	ರಾಮಸ್ವಾಮಿ ಹುಲಕೋಡು	ಸಾವಣ್ಣ ಎಂಟರ್ ಪ್ರೈಸಸ್ (ಎ ಯುನಿಟ್ ಆಫ್. ಐ.ಪಿ.ಎಸ್) ನಂ.57, 1ನೇ ಮಹಡಿ, ಪುಟ್ಟಣ್ಣ ರಸ್ತೆ, ಬಸವನಗುಡಿ, ಬೆಂಗಳೂರು–560 004 (8026607011 / 9845224979)	160	150	ವ್ಯಕ್ತಿತ್ವ ವಿಕಾಸವನ್ನು ಕುರಿತ ಒಂದು ವಿಶಿಷ್ಟ ಗ್ರಂಥ; ಚಿತ್ರನಟ ನಿರ್ದೇಶಕ ಉಪೇಂದ್ರ ಅವರ ಡೈಲಾಗ್‌ಗಳನ್ನು ಆಯ್ಕೆ ಮಾಡಿಕೊಂಡು ಅವುಗಳಿಗೆ ಭಾಷ್ಯ ಬರೆದಂತೆ 'ಜೀವನಪಾಠ'ವನ್ನು ನೀಡುತ್ತದೆ. ಉಪೇಂದ್ರ ಅವರ ಹೇಳಿಕೆ, ಅದರ ವಿವರಣೆ, 'ಟಿಪ್ಸ್' ರೂಪದ ಹೇಳಿಕೆಗಳು, ಜಗತ್ತಿನ ಪ್ರಸಿದ್ಧ ಚಿಂತಕರ ಹೇಳಿಕೆಯ ಸಮರ್ಥನೆ ಈ ಕ್ರಮದ ಒಟ್ಟು ಬರಹಗಳು (ಅಧ್ಯಾಯಗಳು) ಇಲ್ಲಿ ಸಂಕಲನಗೊಂಡಿದೆ.	


14.	15.	ಕಾಸು – ಕುಡಿಕೆ	ವಿಚಾರ	ಜಯದೇವ ಪ್ರಸಾದ ಮೊಳೆಯಾರ	ಸಾವಣ್ಣ ಎಂಟರ್ ಪ್ರೈಸಸ್ (ಎ ಯುನಿಟ್ ಆಫ್. ಐ.ಪಿ.ಎಸ್) ನಂ.57, 1ನೇ ಮಹಡಿ, ಪುಟ್ಟಣ್ಣ ರಸ್ತೆ, ಬಸವನಗುಡಿ, ಬೆಂಗಳೂರು–560 004 (8026607011 / 9845224979)	233	180	ವಾಣಿಜ್ಯ ಹಣ ಹೂಡಿಕೆಯ ಕೈಪಿಡಿಯಂತಿದೆ. ಸಾಮಾನ್ಯನ ಹೂಡಿಕೆಯ ಆಯ್ಕೆಗಳನ್ನು ತಿಳಿಸಿಕೊಡುತ್ತದೆ. ಶೇರು, ಮ್ಯೂಚುವಲ್ ಫಂಡು, ಇನ್ಸೂರೆನ್ಸ್, ಚಿನ್ನ, ನಿಗದಿತ ಆದಾಯದ ಹೂಡಿಕೆ, ಸಾಲಗಳ ವಿವಿಧ ರೂಪಗಳು, ಉದ್ಯೋಗಸ್ಥರ ನಿವೃತ್ತಿ ಸೌಲಭ್ಯಗಳು ಮೊದಲಾದುವಲ್ಲದೆ, ದಿನವೂ ನಡೆಯುವ ವ್ಯಕ್ತಿಯ ಮೋಸಗಳು, ಹೂಡಿಕಾ ಫೋರ್ಟ್ ಪೋಲಿಯೋ ನಿರ್ವಹಣೆ ಇತ್ಯಾದಿ ವಿಚಾರಗಳನ್ನು ಸೂಕ್ತ ಮಾಹಿತಿಗಳ ಸಹಿತ ವಿಮರ್ಶಿಸಲಾಗಿದೆ.	
15.	16.	ಅನಂತದೆಡೆಗೆ	ವಿಚಾರ	ಡಾ. ನಾ. ಸೋಮೇಶ್ವರ	ಸಾವಣ್ಣ ಎಂಟರ್ ಪ್ರೈಸಸ್ (ಎ ಯುನಿಟ್ ಆಫ್. ಐ.ಪಿ.ಎಸ್) ನಂ.57, 1ನೇ ಮಹಡಿ, ಪುಟ್ಟಣ್ಣ ರಸ್ತೆ, ಬಸವನಗುಡಿ, ಬೆಂಗಳೂರು–560 004 (8026607011 / 9845224979)	192	180	ಕಥೆಗಳ ಮೂಲಕ ಕಲಿಕೆ ಮತ್ತು ಚಿಂತನೆಯನ್ನು ಪ್ರಚೋದಿಸುವ ವಿಶಿಷ್ಟ ಕೃತಿ, ವ್ಯಕ್ತಿತ್ವ ವಿಕಾಸಕ್ಕೋಸ್ಕರ ರಚನೆಯಾದದ್ದು, ಐವತ್ತು ಕಥೆಗಳಿವೆ. ಒಂದೆರಡು ಪುಟಗಳಲ್ಲಿ ಕಥೆ, ಕಥೆಯ ಮೂಲಕ ಕಲಿಕೆಗಾಗಿ ಮೂರ್‍ನಾಲ್ಕು ವಾಕ್ಯಗಳ ಆಶಯ ಸೂಚಿ (ಕಥಾಕಲಿಕೆ), ಓದುತ್ತಲೇ ಓದುಗರ ಅನುಭವಗಳ ಮರುಕೊಡಿಸುವಿಕೆಗೆ ಪ್ರಚೋದನೆ (ಅನುಭವ ಹಂಚಿಕೆ), ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು (ಆತ್ಮಾವಲೋಕನ) – ಇದು ಇಲ್ಲಿನ ಪ್ರತಿಯೊಂದು ಬರಹದ ಹಂತಗಳು, ಮಕ್ಕಳಿಗೆ, ಹದಿಹರೆಯದವರಿಗೆ ಪುಸ್ತಕ ಹೆಚ್ಚು ಪ್ರಯೋಜನಕಾರಿ.	
16.	17.	ಕನಸು ಕಾಣೆಯಾಗಿದೆ	ಕಾದಂಬರಿ	ನಟರಾಜು ವಿ.	ಸಾವಣ್ಣ ಎಂಟರ್‌ಪ್ರೈಸೆಸ್ ನಂ.57, 1ನೇ ಮಹಡಿ, ಪುಟ್ಟಮ್ಮ ರಸ್ತೆ, ಬಸವನಗುಡಿ, ಬೆಂಗಳೂರು–560 004 (26607011 / 9845224979)	160	110	ಎರಡು ಭಾಗಗಳ ಒಟ್ಟು ಹದಿನಾರು ಅಧ್ಯಾಯಗಳಲ್ಲಿ ವಿನ್ಯಾಸಗೊಂಡಿರುವ ಸಾಮಾಜಿಕ ಬದ್ಧತೆ ಮತ್ತು ಕಾಳಜಿಯನ್ನು ಕೇಂದ್ರವಾಗಿರಿಸಿಕೊಂಡ ಕಾದಂಬರಿ ಸಮಕಾಲೀನ ವ್ಯವಸ್ಥೆಯ ರಾಜಕಾರಣ, ಆಡಳಿತ ಮೊದಲಾದ ಆಯಾಮಗಳ ಬಗೆಗೆ ಜನತೆ ಅನಾಸಕ್ತರಾದಾಗ ಸಾಮಾಜಿಕತೆಯಲ್ಲಿ ಕಾಣಿಸಿಕೊಳ್ಳುವ 'ಕಂಪ್ಲೇಸಂಟ್ ಮನೋಭಾವ'ವನ್ನು ಈ ಕಾದಂಬರಿ ಅನಾವರಣಗೊಳಿಸುತ್ತದೆ.	
17.	18.	ನೀನೇ ಅರಸು	ವಿಚಾರ	ಸದಾನಂದ ಹೆಗಡೆ	ಸಾವಣ್ಣ ಎಂಟರ್‌ಪ್ರೈಸೆಸ್ ನಂ.57, 1ನೇ ಮಹಡಿ, ಪುಟ್ಟಮ್ಮ ರಸ್ತೆ, ಬಸವನಗುಡಿ, ಬೆಂಗಳೂರು–560 004 (26607011 / 9845224979)	140	125	ಇಪ್ಪತ್ತೊಂಭತ್ತು ಲೇಖನಗಳ ಸಂಕಲನ ಪ್ರಚಲಿತ ವಿದ್ಯಮಾನಗಳನ್ನು, ಸಾಮಾಜಿಕ ಐತಿಹಾಸಿಕ ವಿಚಾರಗಳನ್ನು ಆಧರಿಸಿ ಹರಿಯಬಿಟ್ಟ ವಿಚಾರ ಲಹರಿ ಓದುವ ಕಿಶೋರರಲ್ಲಿ ಬದುಕಿನ ಕುತೂಹಲವನ್ನು, ಭರವಸೆಯನ್ನು, ಸಾಹಸಮಯ ಪ್ರವೃತ್ತಿಯನ್ನು ಹೆಚ್ಚಿಸುತ್ತದೆ. ಆಕರ್ಷಕ ನಿರೂಪಣೆ ಓದಿಕೊಳ್ಳುವ ಗುಣವನ್ನು ವೃದ್ಧಿಸಿದೆ.	



18.	19.	ಆರ್ಥಿಕ ಪಂಚರತ್ನಗಳು	ವಿಚಾರ ಸಾಹಿತ್ಯ	ವಸಂತ ಗುಮಾಸ್ತೆ	ಸಾವಣ್ಣ ಎಂಟರ್‌ಪ್ರೈಸೆಸ್ ನಂ.57, 1ನೇ ಮಹಡಿ, ಪುಟ್ಟಮ್ಮ ರಸ್ತೆ, ಬಸವನಗುಡಿ, ಬೆಂಗಳೂರು–560 004 (26607011 / 9845224979)	184	125	ಕರ್ನಾಟಕದ ಬಿಸಿನೆಸ್ ಮಹಾರಾಜರು ಎಂಬ ಉಪಶೀರ್ಷಿಕೆಯಲ್ಲಿ ರಚನೆಯಾಗಿರುವ ಈ ಪುಸ್ತಕ ಆರು ಮಂದಿ ವಾಣಿಜ್ಯ ವ್ಯವಹಾರ ಪಟುಗಳ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಒದಗಿಸುತ್ತದೆ. ವಿಜಯ ಸಂಕೇಶ್ವರ, ನಾರಾಯಣಮೂರ್ತಿ, ಅಜೀಮ್ ಪ್ರೇಮ್‌ಜಿ, ಕಿರಣ್ ಮುಜಮ್‌ದಾರ ಶಾ .ಜಿ.ಆರ್. ಗೋಪೀನಾಥ್ ಈ ಆರುಮಂದಿ ಪ್ರಸಿದ್ಧ ಉದ್ಯಮಿಗಳ ಅದ್ಭುತ ಸಾಧನೆಗಳು, ಎದುರಿಸಿದ ಸಮಸ್ಯೆಗಳು, ಅನುಭವಿಸಿದ ಕಷ್ಟ – ನಷ್ಟಗಳು ಇತ್ಯಾದಿಗಳನ್ನು ವಸ್ತುನಿಷ್ಠವಾಗಿ ನಿರೂಪಿಸಲಾಗಿದೆ.	
19.	20.	ನಾನು ನಾನಲ್ಲ ನಮ್ಮೊಳಗಿನ EGO	ವಿಚಾರ	ರಾಜು ಗಡ್ಡಿ	ಸಾವಣ್ಣ ಎಂಟರ್‌ಪ್ರೈಸೆಸ್ ನಂ.57, 1ನೇ ಮಹಡಿ, ಪುಟ್ಟಮ್ಮ ರಸ್ತೆ, ಬಸವನಗುಡಿ, ಬೆಂಗಳೂರು–560 004 (26607011 / 9845224979)	172	125	ಅಹಂಕಾರಿ ನಾನು ಮತ್ತು ಆರೋಗ್ಯಕರ ನಾನುವಿನ ಮಧ್ಯದ ವ್ಯತ್ಯಾಸವನ್ನು ಕಂಡುಕೊಂಡು ಬ್ಯಾಲೆನ್ಸ್ ಮಾಡುವ ಜೀವನಪಾಠವನ್ನು ಈ ಕೃತಿ ನೀಡುತ್ತದೆ. ಪ್ರಜ್ಞಾಪೂರ್ವಕವೋ ಅಪ್ರಜ್ಞಾ ಪೂರ್ವಕವೋ ಮನಸ್ಸಿನ ವೈಜ್ಞಾನಿಕ ಅರಿವಿನ ಆಶಯವನ್ನು ಹೊತ್ತ ಈ ಕೃತಿ ವಿಶಿಷ್ಟ ವಸ್ತು – ನಿರೂಪಣೆಯಿಂದ ಆಕರ್ಷಕವಾಗಿ ಓದಿಸಿಕೊಳ್ಳುವ ಇಪ್ಪತ್ತೊಂದು ಲೇಖನಗಳನ್ನು ಒಳಗೊಂಡಿದೆ.	
20.	21.	ಓ… ನನ್ನ ಚೇತನ…	ವ್ಯಕ್ತಿತ್ವ ವಿಕಾಸ	ಡಾ. ನಾ. ಸೋಮೇಶ್ವರ	ಸಾವಣ್ಣ ಎಂಟರ್‌ಪ್ರೈಸೆಸ್ ನಂ.57, 1ನೇ ಮಹಡಿ, ಪುಟ್ಟಮ್ಮ ರಸ್ತೆ, ಬಸವನಗುಡಿ, ಬೆಂಗಳೂರು–560 004 (26607011 / 9845224979)	192	180	ಬದುಕಿನ ಬಗ್ಗೆ ಹಲವು ಒಳನೋಟಗಳನ್ನು ನೀಡುವ ಕಥಾಸಂಗ್ರಹ, ಇಲ್ಲಿಯ ಒಂದೊಂದು ಕಥೆಗಳನ್ನೂ ಆಸ್ವಾದಪೂರ್ವಕವಾಗಿ ಸವಿಯಬಹುದು. ಸಂಕ್ಷಿಪ್ತ ನಿರೂಪಣೆ ಕಥೆ, ಕಥೆಯ ಮೂಲಕ ಸಾಧಿಸಬಹುದಾದ ಕಲಿಕೆಗೆ ನೆರವಾಗುವ ಆಯ್ದ ವಾಕ್ಯಗಳು, ಓದಿನ ಮೂಲಕ ಲಭಿಸುವ ಅನುಭವದ ಅಂಶಗಳ ಚರ್ಚೆಗೆ ಸೂಚನೆಗಳು, ಅಂತರ್ ನಿರೀಕ್ಷಣೆಗೆ ನೆರವಾಗುವ ಪ್ರಶ್ನೆಗಳು – ಹೀಗೆ ರಚನಾ ಕ್ರಮವಿದೆ ಪ್ರತಿ ಕಥೆಯಲ್ಲಿ; ನೀತಿ ಮತ್ತು ಆಶಯಕ್ಕೆ ಸಂಬಂಧಿಸಿದ ರೇಖಾಚಿತ್ರಗಳಿವೆ. ಇಂತಹ ಐವತ್ತು ಕಥೆಗಳ ಸಂಕಲನ ಇದು ಸ್ವರೂಪದಲ್ಲಿ, ಆಶಯ ವ್ಯಕ್ತಿತ್ವ ವಿಕಾಸ, ಸಾಮಾನ್ಯಜ್ಞಾನ ವೃದ್ಧಿ ಇತ್ಯಾದಿ ಕಾಣಬಹುದು.	
21.	22.	ನೀನಿಲ್ಲದೇ ನನಗೇನಿದೆ…!	ವಿಚಾರ	ಡಾ. ವಿರೂಪಾಕ್ಷ ದೇವರಮನೆ	ಸಾವಣ್ಣ ಎಂಟರ್‌ಪ್ರೈಸೆಸ್ ನಂ.57, 1ನೇ ಮಹಡಿ, ಪುಟ್ಟಮ್ಮ ರಸ್ತೆ, ಬಸವನಗುಡಿ, ಬೆಂಗಳೂರು–560 004 (26607011 / 9845224979)	160	160	ತಕ್ಕ ಸಂಗಾತಿಯನ್ನು ಆರಿಸಿಕೊಳ್ಳುವುದರ ಬಗ್ಗೆ, ವಿವಾಹಿತ ಜೀವನವನ್ನು ಸುಂದರವಾಗಿಟ್ಟುಕೊಳ್ಳುವುದರ ಬಗ್ಗೆ, ಮೂಡಿದ ಮನಸ್ತಾಪಗಳನ್ನು ಸಮರ್ಥವಾಗಿ ಪರಿಹರಿಸಿಕೊಳ್ಳುವುದರ ಬಗ್ಗೆ, ದಾಂಪತ್ಯ ಸುಖವನ್ನು ನವ ವಿವಾಹಿತರು ಸರಿಯಾಗಿ ಸವಿಯಲು, ಸುಂದರ ದಾಂಪತ್ಯಕ್ಕೆ ಸರಳ ಮಾರ್ಗದರ್ಶಿಯಾಗಲು….. ಇಂಥವೇ ಆಶಯಗಳನ್ನು ಹೊತ್ತು ಇಪ್ಪತ್ತೈದು ಲೇಖನಗಳನ್ನು ಒಳಗೊಂಡ ಪುಸ್ತಕ.	






22.	23.	ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮರು	ವಿಚಾರ ವಿಮರ್ಶೆ	ಡಾ. ಚಿತ್ತಕಳಾ ಜೆ. ಮಠಪತಿ	ಜೆ.ಎಸ್. ಪಬ್ಲಿಕೇಷನ್ಸ್ ನಂ. 23–71, ಬನಶಂಕರಿ ಓಣಿ, ಬಸವಕಲ್ಯಾಣ, ಬೀದರ ಜಿಲ್ಲೆ	116	100	ಕಾಯಕ ಜೀವಿಗಳಾದ ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮರು 12ನೇ ಶತಮಾನದ ಶರಣ ಜೀವಿಗಳು, ಅಸಂಗ್ರಹ ತತ್ವ, ಸತ್ಯ ಶುದ್ಧ ಕಾಯಕ, ಶರಣರ ಅನುಭಾವದ ಸಂಘಗಳಿದ್ದಾಗ ಘನಮನ ಸಂಪನ್ನ ಬದುಕು ಸಾಧ್ಯ ಎಂದು ಬದುಕಿ ತೋರಿಸಿದ ದಂಪತಿಗಳನ್ನು ಅವರ ವಚನಗಳನ್ನು ಕುರಿತ ಸಂಶೋಧನಾ ಕೃತಿ ಇದು.	
23.	24.	ಡಾ. ಶೈಲಜಾ ಉಡಚಣ ಅವರ ಸಮಗ್ರ ಸಾಹಿತ್ಯ ಒಂದು ಅಧ್ಯಯನ	ಸಂಶೋಧನೆ – ಅಧ್ಯಯನ	ಡಾ. ಚಿತ್ಕಳಾ ಜೆ. ಮಠಪತಿ	ಜೆ.ಎಸ್. ಪಬ್ಲಿಕೇಷನ್ಸ್ ನಂ. 23–71, ಬನಶಂಕರಿ ಓಣಿ, ಬಸವಕಲ್ಯಾಣ, ಬೀದರ ಜಿಲ್ಲೆ	318	200	ಉತ್ತರ ಕರ್ನಾಟಕದ ಪ್ರಮುಖ ಕವಯಿತ್ರಿ, ಬಂಡಾಯ ಕಾಲಘಟ್ಟದ ಪ್ರತಿಭಾನ್ವಿತ ಲೇಖಕಿ ಶೈಲಜಾ ಉಡಚಣ ಸ್ತ್ರೀ ಸಂವೇದನಾ ಶೀಲವಾದ ಅವರ ಸಾಹಿತ್ಯವನ್ನು ಸಂಶೋಧನಾ ನೆಲೆಯಿಂದ, ಸಮಗ್ರವಾಗಿ ಅವಲೋಕಿಸಿದ ಮಹತ್ವದ ಕೃತಿಯೆನಿಸಿದೆ. ಉದ್ದೇಶ – ವ್ಯಾಪ್ತಿ, ಜೀವನ–ಸಾಧನೆ, ಸಮಗ್ರ ಸಾಹಿತ್ಯ, ಕಾವ್ಯದ ಭಾಷೆ – ಪ್ರತೀಕ, ಸಮಕಾಲೀನ ಸ್ತ್ರೀಸಾಹಿತ್ಯದಲ್ಲಿ ಶೈಲಜಾ ಉಡುಚಣರ ಸ್ಥಾನ–ಮಾನ, ಅಧ್ಯಯನದ ಫಲಕೃತಿ ಎಂದು ಏಳು ಅಧ್ಯಾಯಗಳಲ್ಲಿ ಕೃತಿ ರಚನೆಯಾಗಿದೆ.	
24.	25.	ಶ್ರೀ ಶಂಕರಾಚಾರ್ಯರು ಶ್ರೀ ಬಸವೇಶ್ವರರು	ವಿಚಾರ	ಆರ್.ಪಿ. ನಾರಾಯಣ	ಹರ್ಷಿತಾ ಎಂಟರ್ ಪ್ರೈ. ನಂ. 1526, 2ನೇ ಮಹಡಿ, 3ನೇ ಕ್ರಾಸ್, 9ನೇ ಮೇನ್, 'ಎ' ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010	80	40	ಮಠಾಚಾರ್ಯ, ದ್ವೈತ ಸಿದ್ಧಾಂತ ಪ್ರವರ್ತಕ ಶಂಕರಾಚಾರ್ಯರು ಮತ್ತು ಸಮಾಜ ಸುಧಾರಕ ಮಾನವತಾವಾದಿ, ವಚನಕಾರ ಶಿವಶರಣ ಬಸವೇಶ್ವರರ ಜೀವನ ಚರಿತ್ರೆಯ ಸರಳ ನಿರೂಪಣೆ ಇದೆ. ಮಕ್ಕಳ ಓದಿಗೆ ರಚನೆಯಾದದ್ದು. ರೇಖಾ ಚಿತ್ರಗಳಿವೆ.	
25.	26.	ಕೌಟಿಲ್ಯ, ಚಾರ್ಲಿ ಚಾಪ್ಲಿನ್	ವ್ಯಕ್ತಿ ಚಿತ್ರ	ಕೆ.ಎಸ್. ಅನಂತರಾಜು	ಹರ್ಷಿತಾ ಎಂಟರ್ ಪ್ರೈ. ನಂ. 1526, 2ನೇ ಮಹಡಿ, 3ನೇ ಕ್ರಾಸ್, 9ನೇ ಮೇನ್, 'ಎ' ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010	80	40	ಪ್ರಾಚೀನ ಅರ್ಥಶಾಸ್ತ್ರಜ್ಞ, ರಾಜ್ಯಾಡಳಿತ ಚಿಂತಕ ಕೌಟಿಲ್ಯನ ಮತ್ತು ಕಳೆದ ಶತಮಾನದ ಮಾನವತಾವಾದಿ, ಪಾಶ್ಚಾತ್ಯ ಚಿತ್ರ ರಂಗದ ಮೇರು ಕಲಾವಿದ ಮಹಾನ್ ಹಾಸ್ಯ ನಿರೂಪಕ ಚಾರ್ಲಿ ಚಾಪ್ಲಿನ್ – ಇವರ ಸಂಕ್ಷಿಪ್ತ ಜೀವನ ಚರಿತ್ರೆ ಇಲ್ಲಿದೆ. ಮಕ್ಕಳಿಗೆ ಇವರನ್ನು ಪರಿಚಯಿಸುವ ಉದ್ದೇಶದಿಂದ ರಚನೆಯಾದ ಪುಸ್ತಕ . ಇಲ್ಲಿನ ಸರಳ ಭಾಷೆ, ನಿಖರ ನಿರೂಪಣೆ ಮತ್ತು ವಿಭಾಗಗಳ ವಿಂಗಡಣೆ ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿದೆ. ರೇಖಾಚಿತ್ರಗಳು ಆಕರ್ಷಕವಾಗಿವೆ.	
26.	27.	ಚಾರ್ಲ್ಸ್ ಡಾರ್ವಿನ್ ಅಲೆಗ್ಸಾಂಡರ್ ಫ್ಲೇಮಿಂಗ್	ವ್ಯಕ್ತಿ ಚಿತ್ರ	ಜಿ. ರಾಮಕೃಷ್ಣ	ಹರ್ಷಿತಾ ಎಂಟರ್ ಪ್ರೈ. ನಂ. 1526, 2ನೇ ಮಹಡಿ, 3ನೇ ಕ್ರಾಸ್, 9ನೇ ಮೇನ್, 'ಎ' ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010	80	40	ಜೀವ ವಿಕಾಸತತ್ವ, ವೈದ್ಯವಿಜ್ಞಾನ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದ ಚಾರ್ಲ್ಸ್ ಡಾರ್ವಿನ್ ಅಲೆಗ್ಸಾಂಡರ್ ಫ್ಲೇಮಿಂಗ್ ಅವರ ಜೀವನ ಚಿತ್ರಣ ಇಲ್ಲಿದೆ. ಅವರ ಅನ್ವೇಷಣೆ ಮತ್ತು ಸಿದ್ಧಾಂತ ನಿರೂಪಣೆಗೆ ಸಂಬಂಧಿಸಿದ ರೇಖಾ ಚಿತ್ರಗಳಿವೆ. ಮಕ್ಕಳ ಅಭ್ಯಾಸಕ್ಕೆಂದೇ ರೂಪಿಸಿದ ಕೃತಿ.	




27.	28.	ಸಂತ ಶಿಶುನಾಳ ಶರೀಫರು ರಾಷ್ಟ್ರಕವಿ ಕುವೆಂಪು	ವ್ಯಕ್ತಿ ಚಿತ್ರ	ಆರ್.ಪಿ. ನಾರಾಯಣ	ಹರ್ಷಿತಾ ಎಂಟರ್ ಪ್ರೈ. ನಂ. 1526, 2ನೇ ಮಹಡಿ, 3ನೇ ಕ್ರಾಸ್, 9ನೇ ಮೇನ್, 'ಎ' ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010	80	40	ಸಂತಕವಿ ಶಿಶುನಾಳ ಶರೀಫ ಮತ್ತು ವಿಚಾರವಂತ ಮಹಾಕವಿ ಕುವೆಂಪು ಅವರ ಸಂಕ್ಷಿಪ್ತ ಜೀವನ ಚರಿತ್ರೆ; ಅವರ ಸಾಹಿತ್ಯದ ಕಿರುಪರಿಚಯ; ಅವರವರ ಬದುಕಿನ ಮುಖ್ಯ ಘಟನೆಗಳನ್ನು ಬಿಂಬಿಸುವ ರೇಖಾಚಿತ್ರಗಳು ಈ ಕೃತಿಯಲ್ಲಿವೆ. ಮಕ್ಕಳ ಓದಿಗೆ ರಚಿತವಾದ ಪುಸ್ತಕ, ಭಾಷೆ ಮತ್ತು ನಿರೂಪಣೆ ಉದ್ದೇಶಕ್ಕೆ ತಕ್ಕಂತೆ ಸರಳ ಮತ್ತು ನೇರ.	
28.	29.	ಅಬ್ರಹಾಂ ಲಿಂಕನ್ ಮಾರ್ಟಿನ್ ಲೂಥರ್ ಕಿಂಗ್	ವ್ಯಕ್ತಿ ಚಿತ್ರ	ಕೆ.ಎಸ್. ಅನಂತರಾಜು	ಹರ್ಷಿತಾ ಎಂಟರ್ ಪ್ರೈ. ನಂ. 1526, 2ನೇ ಮಹಡಿ, 3ನೇ ಕ್ರಾಸ್, 9ನೇ ಮೇನ್, 'ಎ' ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010	80	40	ಸಾಮಾಜಿಕ ಅಸಮಾನತೆ, ಜನಾಂಗ ಭೇದದ ವಿರುದ್ಧ ಹೋರಾಡಿ ಮಡಿದ ಅಮೇರಿಕಾದ ಇಬ್ಬರು ಮಾನವತಾವಾದಿಗಳ ಸಂಕ್ಷಿಪ್ತ ಜೀವನ ಚರಿತ್ರೆ ಇದೆ. ರೇಖಾಚಿತ್ರಗಳು ಆಯಾ ವ್ಯಕ್ತಿಗಳ ಮುಖ್ಯ ಸಂದರ್ಭಗಳನ್ನು ಪ್ರತಿನಿಧಿಸುತ್ತವೆ. ಮಕ್ಕಳ ಓದಿಗಾಗಿ ರಚನೆಯಾದ ಕಿರುಹೊತ್ತಿಗೆ.	
29.	30.	ಮಹಾತ್ಮಗಾಂಧಿ ಬಾಬಾಸಾಹೇಬ ಅಂಬೇಡ್ಕರ್	ವ್ಯಕ್ತಿ ಚಿತ್ರ	ಆರ್.ಪಿ. ನಾರಾಯಣ	ಹರ್ಷಿತಾ ಎಂಟರ್ ಪ್ರೈ. ನಂ. 1526, 2ನೇ ಮಹಡಿ, 3ನೇ ಕ್ರಾಸ್, 9ನೇ ಮೇನ್, 'ಎ' ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010	80	40	ಸ್ವಾತಂತ್ರ್ಯಹೋರಾಟ ಸಂದರ್ಭದ ಮತ್ತು ಸ್ವಾತಂತ್ರ್ಯಾ ನಂತರದ ಭಾರತದ ಬದುಕಿನಲ್ಲಿ ಮಹತ್ವ ಸ್ಥಾಪಿಸಿಕೊಂಡ ಎರಡು ಮಹಾನ್ ಚೇತನಗಳ ಸರಳ ಮತ್ತು ಸಂಕ್ಷಿಪ್ತ ಜೀವನ ಚಿತ್ರ ಈ ಕಿರುಕೃತಿ. ಮಕ್ಕಳ ಓದಿಗಾಗಿ ರಚನೆಯಾಗಿದ್ದು ಅಲ್ಲಲ್ಲಿ ರೇಖಾಚಿತ್ರಗಳಿವೆ.	
30.	31.	ಗೆಲಿಲಿಯೋ ಮೈಕೇಲ್ ಫ್ಯಾರಡೆ	ವ್ಯಕ್ತಿ ಚಿತ್ರ	ಜಿ. ರಾಮಕೃಷ್ಣ	ಹರ್ಷಿತಾ ಎಂಟರ್ ಪ್ರೈ. ನಂ. 1526, 2ನೇ ಮಹಡಿ, 3ನೇ ಕ್ರಾಸ್, 9ನೇ ಮೇನ್, 'ಎ' ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010	80	40	ಪ್ರಸಿದ್ಧ ವಿಜ್ಞಾನಿಗಳಿಬ್ಬರನ್ನು ಮಕ್ಕಳಿಗೆ ಪರಿಚಯಿಸುವ ಪುಟ್ಟ ಕೃತಿ. ರೇಖಾಚಿತ್ರಗಳಿವೆ, ಸರಳ ಭಾಷೆಯಲ್ಲಿ ಸ್ವಾರಸ್ಯಕರ ಸನ್ನಿವೇಶಗಳನ್ನು ನಿರೂಪಿಸುವುದರಿಂದ ಕುತೂಹಲದಿಂದ ಓದಿಸಿಕೊಳ್ಳುತ್ತದೆ.	
31.	32.	ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ	ವ್ಯಕ್ತಿಚಿತ್ರ	ಜಿ. ರಾಮಕೃಷ್ಣ	ಹರ್ಷಿತಾ ಎಂಟರ್ ಪ್ರೈ. ನಂ. 1526, 2ನೇ ಮಹಡಿ, 3ನೇ ಕ್ರಾಸ್, 9ನೇ ಮೇನ್, 'ಎ' ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010	80	40	ಐತಿಹಾಸಿಕ ವೀರನಾರಿಯರಿಬ್ಬರ ಸಂಕ್ಷಿಪ್ತ – ಸರಳ ಜೀವನ ಚಿತ್ರಣ ಈ ಕಿರುಹೊತ್ತಿಗೆ, ಮಕ್ಕಳ ಓದಿಗಾಗಿ ರಚನೆಯಾದದ್ದು, ರೇಖಾಚಿತ್ರಗಳು ಆಯಾ ವ್ಯಕ್ತಿಗಳ ಬದುಕಿನ ಪ್ರಮುಖ ಸಂಗತಿಗಳನ್ನು ಬಿಂಬಿಸುತ್ತವೆ.	
32.	33.	ಕವಿತೆ ಅಚ್ಚಾಗುವದಿಲ್ಲ	ಕಾವ್ಯ	ಶಿ ಕಾ ಬಡಿಗೇರ	ಬೆರಗು ಪ್ರಕಾಶನ ಶರಧಿ, ಮರಿಯಮ್ಮನ ಗುಡಿ ಹತ್ತಿರ, ಭಾಗ್ಯನಗರ, ತಾ॥, ಕೊಪ್ಪಳ ಜಿಲ್ಲೆ–583238	72	60	ಇದು ಕಾವ್ಯ ಕೃತಿ, ಪತ್ರಿಕೆಗಳಲ್ಲಿ ಪ್ರಕಟಿತ, ಕವಿಯ ಮೊದಲ ಸಂಕಲನ. ಆರೋಗ್ಯಕರ ಸಮಾಜಕ್ಕಾಗಿ ಹಂಬಲಿಸುವ ಆಶಯ ಇಲ್ಲಿನ ಕವಿತೆಗಳಲ್ಲಿದೆ. ನಲವತ್ತೆಂಟು ಕವಿತೆಗಳಿವೆ. ಹಸಿವು – ಶೋಷಣೆ – ಬಡತನದಿಂದ ಬೆಂಡಾದ ಮನುಷ್ಯನಿಗೆ ಮಾನವೀಯತೆಯ ಸ್ಪರ್ಶ ಅಗತ್ಯವೆಂಬುದನ್ನು ಕವಿ ಪ್ರತಿಪಾದಿಸಿದ್ದಾರೆ.	



33.	34.	ಮತದ ಹೋರಿ	ಕಥೆ	ಹನಮಂತ ಹಾಲಿಗೇರಿ	ಸಂಸ್ಕೃತಿ ಪ್ರಕಾಶನ ಆದರ್ಶ ಕಾಲೋನಿ, ಕಂಟೋನ್ಮೆಂಟ್, ಬಳ್ಳಾರಿ–583104 (9448323400)	130	125	ಪ್ರಸ್ತುತ ಜಾಗತೀಕರಣ ಸಂದರ್ಭದಲ್ಲಿನ ಕಲಿಕೆಯ ಗ್ರಾಮಗಳನ್ನು ಕೇಂದ್ರವಾಗಿಟ್ಟುಕೊಂಡು ಗ್ರಾಮಭಾರತದ ಬಡತನ, ಜಾತಿಮತ, ಕೋಮುವಾದ, ಸ್ತ್ರೀ ದೌರ್ಜನ್ಯ ಮುಂತಾದ ವಿಷಯಗಳ ಕುರಿತ ಇಲ್ಲಿನ ಕಥೆಗಳು ರೂಪಿಸಲ್ಪಟ್ಟಿವೆ. ಹತ್ತು ಕಥೆಗಳಿವೆ. ಉತ್ತರ ಕರ್ನಾಟಕದ ಸತ್ವವುಳ್ಳ ಬರಹಗಾರ ಹನುಮಂತ ಹಾಲಗೇರಿ ನಮಗೆ ಉಣಬಡಿಸಲಿರುವ 'ಹುಗ್ಗಿ' ಇನ್ನೂ ಪಾಕಗೊಳ್ಳುತ್ತದೆ. ಹದವನ್ನು ದಕ್ಕಿಸಿಕೊಳ್ಳುವುದು ಸಾಧ್ಯವಿದೆ ಎಂಬುದು ಪುರಾವೆಯಾಗಿ ಈಗಾಗಲೇ ಪ್ರಕಟವಾಗಿರುವ ಇವರ ಎರಡು ಕೃತಿಗಳ ಜೊತೆಗೆ ಇದೂ ಸೇರಿಕೊಂಡಿದೆ.	
34.	35.	ಅಭಿವೃದ್ಧಿ ಅರ್ಥಶಾಸ್ತ್ರ	ಪೂರಕ ಪಠ್ಯ ಪುಸ್ತಕ	ಡಾ. ಈರಣ್ಣ ಹಟ್ಟಿ	ಐ.ಟಿ.ಹೆಚ್. ಪ್ರಕಾಶನ ಬನಹಟ್ಟಿ–587311, ಬಾಗಲಕೋಟ ಜಿಲ್ಲೆ (9343081281)	196	160	ಪದವಿ ಹಂತದ ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗಾಗಿ ಪಠ್ಯಕ್ರಮಾನುಸಾರ ರಚನೆಯಾದ ಕೃತಿ ವಿದ್ಯಾರ್ಥಿಗಳ ಒಂದು ಹಂತದ ಆವಶ್ಯಕತೆಯನ್ನು ಪೂರೈಸುತ್ತದೆ. ವಿಷಯ ಜೋಡಣೆ ಮತ್ತು ಅಳವಡಿಕೆ ಶಿಸ್ತಿದೆ. ಪಠ್ಯಪುಸ್ತಕಕ್ಕಿಂತ ಪರಾಮರ್ಶನ ಗ್ರಂಥದ ಸ್ವರೂಪದಲ್ಲಿದ್ದಿದ್ದರೆ ಇನ್ನೂ ಹೆಚ್ಚು ಉಪಯೋಗವಾಗುತ್ತಿತ್ತು.	
35.	36.	ಭಾರತದ ಆರ್ಥಿಕ ಅಭಿವೃದ್ಧಿ	ಮಾನವಿಕ ಪೂರಕ ಪಠ್ಯ ಪುಸ್ತಕ	ಡಾ. ಈರಣ್ಣ ಹಟ್ಟಿ	ಐ.ಟಿ.ಹೆಚ್. ಪ್ರಕಾಶನ ಬನಹಟ್ಟಿ–587311, ಬಾಗಲಕೋಟ ಜಿಲ್ಲೆ (9343081281)	219	150	ಜಾಗತೀಕರಣ ವ್ಯವಸ್ಥೆಯಲ್ಲಿ ಭಾರತದ ಸ್ಥಿತಿಗತಿ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು. ವಿಶ್ವವಿದ್ಯಾನಿಲಯವೊಂದರ ಬಿಕಾಂ ತರಗತಿಯ ಪಠ್ಯಕ್ರಮಕ್ಕನುಗುಣವಾಗಿ ಬರೆದದ್ದು.	
36.	37.	ಮನನ	ಪ್ರಬಂಧ	ಪ್ರೀಯಾ ಎಮ್. ಕಲ್ಲಬ್ಬೆ	ಸ್ವಸ್ತಿ ಪ್ರಕಾಶನ ಸುಪ್ರಭಾ ಬಿಲ್ಡಿಂಗ್, ಕುಮಟಾ–581343 (8951455445 / 9945546615)	64	50	ಮಾನಸ ಸರೋವರ ಬ್ಲಾಗನಲ್ಲಿ ಆಗಾಗ ಬರೆದ ಮನಸಿನ ಮಥನವೆ ಮನನವಾದ ಈ ಪುಸ್ತಕ ಮನುಷ್ಯ ಭಾವನೆಗಳ ಸಂಬಂಧಗಳ, ಪ್ರೀತಿಗಳ ವಿಷಯಗಳನ್ನು ಒಳಗೊಂಡಿದೆ. ಮನೋ ಸೂಕ್ಷ್ಮಗಳನ್ನು ಅರಿಯುವ ದಿಶೆಯಲ್ಲಿ ಮಾರ್ಗದರ್ಶನ ನೀಡುತ್ತದೆ.	
37.	38.	ಜೀವನ ಸುಗಂಧ	ವಿಚಾರ	ಎಸ್. ಪ್ರೇಮ / ಎಸ್. ಕೇಶವನ್	ಅರೋನಾದ 71/3, ಬಿ. ಶಾಕಂಬರಿನಗರ, ಕನಕಪುರ ಮುಖ್ಯರಸ್ತೆ, ಬೆಂಗಳೂರು–560 070 (080–22456315 / 9008833886)	67	25	ಬಾಳು ಬೆಳಗುವ ಚಿಂತನೆಗಳು ಜೀವನ ಆನಂದಗಳು ಹಾಗೂ ಭೋಗದ ಕಥೆಗಳು ಎಂಬ ಉಪಶೀರ್ಷಿಕೆಯೊಡನೆ ರಚಿತವಾಗಿರುವ ಈ ಪುಸ್ತಕ ಆಧ್ಯಾತ್ಮದ ನೆಲೆಯಲ್ಲಿ ಬದುಕುವ ಕಲೆಯನ್ನು ರೂಢಿಸಿಕೊಳ್ಳುವ ವಿಧಾನವನ್ನು ತಿಳಿಸುತ್ತದೆ. ವಿಚಾರ ಸರಣಿಯ ಜೊತೆಗೆ ಕಥೆ, ಉಪಕಥೆಗಳು ಕೂಡಿ ವಾಚನ ಸುಗಮವಾಗುತ್ತದೆ.	



38.	39.	ಶ್ರಿ ಮಿಟ್ಟು ಮಹಾರಾಜರ ಮಹಿಮಾ ಚರಿತ್ರೆ	ವ್ಯಕ್ತಿ ಚಿತ್ರ	ಇಂದುಮತಿ ಲಮಾಣಿ	ವಾಗ್ದಾಯಿ ಪ್ರಕಾಶನ ಇಂದುಮತಿ ಲಮಾಣಿ, ಎಂ.ಐ.ಜಿ.–2, ಮನೆ ನಂ.118, ಆದರ್ಶನಗರ, ವಿಜಯಪುರ (08352–262570 / 9880271693)	54	80	ಒಬ್ಬ ತಪಸ್ವಿ ಬಂಜಾರಾ ಸಂತ ಅವರು ನಡೆದು ಬಂದ ದಾರಿ ಹಾಗೂ ಅವರಿಂದಾದ ಜನಪರ ಸೇವೆ, ಪವಾಡ ಹಾಗೂ ಸಮಾಜಕ್ಕೆ ಕೊಟ್ಟ ಉತ್ತಮ ಸಂದೇಶಗಳ ದಾಖಲೆ ಈ ಪುಸ್ತಕ.	
39.	40.	ರಾಜಕೀಯ ಧೀಮಂತ ಶ್ರೀ ಎಲ್. ಆರ್. ನಾಯಕ	ವ್ಯಕ್ತಿ ಚಿತ್ರ	ಇಂದುಮತಿ ಲಮಾಣಿ	ವಾಗ್ದಾಯಿ ಪ್ರಕಾಶನ ಇಂದುಮತಿ ಲಮಾಣಿ, ಎಂ.ಐ.ಜಿ.–2, ಮನೆ ನಂ.118, ಆದರ್ಶನಗರ, ವಿಜಯಪುರ (08352–262570 / 9880271693)	80	75	ಬಂಜಾರಾ ಸಮುದಾಯವೇ ಮೊದಲಾದ ಪರಿಶಿಷ್ಟ ಜಾತಿ – ವರ್ಗಕ್ಕೆ ಸೇರಿದ ಶೋಷಿತ ಸಮುದಾಯಗಳನ್ನು ಮೇಲೆತ್ತಲು ಶ್ರಮಿಸಿ, ಸಾಮಾಜಿಕ ಜಾಗೃತಿ ಮೂಡಿಸಲು ಯತ್ನಿಸಿದ ಪ್ರಾಮಾಣಿಕ ರಾಜಕಾರಣಿ ಶ್ರೀ ಎಲ್.ಆರ್. ನಾಯಕ ಸಂಕ್ಷಿಪ್ತ ಜೀವನ ಕಥೆ ಈ ಕೃತಿಯಲ್ಲಿದೆ.	
40.	41.	ನದಿ ಧ್ಯಾನದಲ್ಲಿದೆ	ಕವಿತೆ	ಕೆ.ಎನ್. ಲಾವಣ್ಯ ಪ್ರಭಾ	ಭೂಮಿಕಾ ಪ್ರಕಾಶನ 12, 4ನೇ ಬ್ಲಾಕ್, ಎಸ್.ಬಿ.ಎಂ. ಲೇಔಟ್, ಶ್ರೀರಾಂಪುರಂ, 2ನೇ ಹಂತ, ಮೈಸೂರು–570 023 (9480663964 / 9243501563)	74	70	ನಲವತ್ತೊಂಬತ್ತು ಕವಿತೆಗಳಿರುವ ಸಂಕಲನ ಕೃತಿ. ಪ್ರಬುದ್ಧ ಆಲೋಚನೆಯ ಗಾಢ ಅನುಭವದ ಪ್ರತಿಫಲನ ಈ ಕವಿತೆಗಳು. ತನಗೆ ತಾನೇ ರೂಪುಗೊಳ್ಳುವ ಆತ್ಮಾನುಸಂಧಾನದ ಪರಿ ಕವಿತೆ ಎಂಬುದು ಓದಿನ ಅನುಭವದಿಂದ ತಿಳಿಯುತ್ತದೆ. ವೈವಿಧ್ಯಮಯ ಲಯ, ಮುಖವಾಡರಹಿತ ಮನಸ್ಸಿನ ನೈಜ ಅಭಿವ್ಯಕ್ತಿ ಈ ಕವಿತೆಗಳಲ್ಲಿದೆ.	
41.	43.	ವಿಷಯಾಧಾರಿತ ಕನ್ನಡ ಭಾಷಾ ಭೋಧನೆ	ಶೈಕ್ಷಣಿಕ ಪೂರಕ ಪಠ್ಯ	ಡಾ. ಉಮಾದೇವಿ ಕೆ.ಆರ್.	ಜ್ಞಾನದೀಪಿಕ ನಂ.63, 2ನೇ ಕ್ರಾಸ್, ಪಿ.ಅಂಡ್ ಟಿ. ಕಾಲೋನಿ, ಆರ್.ಟಿ.ನಗರ, ಬೆಂಗಳೂರು–560 032 (23336722)	––	130	ಬಿ.ಎಡ್. ಮತ್ತು ಡಿ.ಎಸ್.ಕೋರ್ಸ್‌ಗಳ ಪಠ್ಯಕ್ರಮವನ್ನು ಇಟ್ಟುಕೊಂಡು, ಶಿಕ್ಷಣಾಭ್ಯಾಸಗಳಿಗಾಗಿ ರಚನೆಯಾದ ಪುಸ್ತಕ, ಶಿಕ್ಷಣ ತರಬೇತಿ ಮತ್ತು ಶಿಕ್ಷಕವೃತ್ತಿ ನಿರತರಿಗೆ ಉಪಯುಕ್ತ . ಕನ್ನಡ ಭಾಷಾಭೋಧನೆಯ ಬಗೆಗೆ ನಿಖರ ಪರಿಕಲ್ಪನೆ ಮೂಡಿಸುವ ಪ್ರಯತ್ನ ಇಲ್ಲಿದೆ. ವ್ಯಾಕರಣ ಪರಿಚಯ, ಭಾಷಾ ಬೋಧನಾ ವಿಧಾನ, ಶಿಕ್ಷಣ ಪದ್ಧತಿಯ ಬಗೆಗೆ ಚರ್ಚಿಸಲಾಗಿದೆ.	
42.	45.	ಸತ್ಯಸಂಧ ಮಹಾತ್ಮ ಗಾಂಧೀಜಿ	ವ್ಯಕ್ತಿ ಚಿತ್ರ	ಡಿ.ಎ. ಲಕ್ಷ್ಮೀನಾಥ	ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್ (ರಿ.) ನಂ.24/16–1, 9ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ದೀಪಾಂಜಲಿ ನಗರ, ಮೈಸೂರು ರಸ್ತೆ, ಬೆಂಗಳೂರು–26 (9448880985)	84	70	ಗಾಂಧೀಜಿಯವರ ಜೀವನ ಚರಿತ್ರೆಯನ್ನು ಮಕ್ಕಳ ಜ್ಞಾನ ಮಟ್ಟಕ್ಕೆ ಹೊಂದುವಂತೆ ಸರಳ ಶೈಲಿಯಲ್ಲಿ ನಿರೂಪಿಸಲಾಗಿದೆ.	
43.	46.	ಮೂರ್ತಿ ಭಾವೋಕ್ತಿ	ಕಾವ್ಯ	ಸಿ.ಎಸ್.ವಿ. ಮೂರ್ತಿ	ಶಾಮೂ ಪ್ರಕಾಶನ 247, 6ನೇ ಮೇನ್, 4ನೇ ಬ್ಲಾಕ್, ಜಯನಗರ, ಬೆಂಗಳೂರು–560 011 (22444762 / 9900600247)	344	180	ನಾಲ್ಕು ಸಾವಿರ ಪದ್ಯ (ಕಗ್ಗ)ಗಳ 2005 ಇಲ್ಲಿವೆ. ಮುಕ್ತಕಗಳ ಸಂಕಲನ ಎಂದರೂ ಸರಿಯೆ, ಹಿತವಚನ, ನೀತಿಬೋಧೆ ಈ ಎಲ್ಲಾ ಪದ್ಯಗಳ ಆಶಯ, ಆಧ್ಯಾತ್ಮಿಕ, ಸಂಸಾರಿಕವೂ ಸೇರಿದಂತೆ ಹಲವು ವಿಷಯಗಳು ಚಿಂತನೆಗೆ ಒಳಪಟ್ಟಿವೆ. ನೀತಿ, ನ್ಯಾಯ, ಧರ್ಮ, ಭಕ್ತಿ, ಪ್ರೀತಿ, ವರ್ಣನೆ ನಿಸರ್ಗ, ಶೃಂಗಾರ, ವೈರಾಗ್ಯ, ಬದುಕು, ಸಾವು, ಕರ್ಮ ಮುಂತಾದವುಗಳ ದಿಕ್ಸೂಚಿ ಸೂಕ್ತಿಗಳಾಗಲು ಹೆಣಗಿವೆ.	



44.	47.	ಮುತ್ತಿನ ಹಾರ	ಕಥೆ	ಎಂ.ಆರ್. ನಾಗರಾಜ ರಾವ್	ಅನನ್ಯ ಪ್ರಕಾಶನ ನಂ.4, ಗುಡ್ಡದಹಳ್ಳಿ ಮುಖ್ಯರಸ್ತೆ, ಆರ್.ಟಿ.ನಗರ, ಅಂಚೆ, ಬೆಂಗಳೂರು–560032 (7829306877)	126	125	ಸರಳವಾದ ಭಾಷೆ ಇದೆ, ಕನ್ನಡ ಸಾಹಿತ್ಯದಲ್ಲಿ ಕಥಾ ಸಂಕಲನಕ್ಕೆ ಉತ್ತಮ ಕೊಡುಗೆ ಅನುಭವವೇದ್ಯ ಸಂಗತಿಗಳೊಡನೆ ಮನಕಲಕುವ, ಹೃದಯಸ್ಪರ್ಶಿ ಕಥೆಗಳಿವೆ	
45.	48.	ಸಾಮ್ರಾಟ್ ಅಶೋಕ	ಕಾದಂಬರಿ	ಡಿ.ಎ. ರಾಘವೇಂದ್ರ ರಾವ್	ಅನನ್ಯ ಪ್ರಕಾಶನ ನಂ.4, ಗುಡ್ಡದಹಳ್ಳಿ ಮುಖ್ಯರಸ್ತೆ, ಆರ್.ಟಿ.ನಗರ, ಅಂಚೆ, ಬೆಂಗಳೂರು–560032 (7829306877)	134	125	ಇದು ಐತಿಹಾಸಿಕ ಕಾದಂಬರಿ, ಗತಕಾಲದ ಸ್ಮರಣೆಗೆ ಪ್ರತಿ ರೂಪ, ಐತಿಹಾಸದ ಅನೇಕ ಘಟನಾವಳಿಗಳು ಇದರಲ್ಲಿ ಅರ್ಥವತ್ತಾಗಿ ನಿರೂಪಿತವಾಗಿವೆ.	
46.	50.	ಕುಂಭ ಮೇಳ	ಸಣ್ಣಕಥೆ	ಆರ್. ರತ್ನಯ್ಯ	ದೀಪಕ್ ಪ್ರಕಾಶನ ವಿನೋಬನಗರ, ಶಿವಮೊಗ್ಗ (9449552802)	166	80	ತೆಲುಗಿನಿಂದ ಅನುವಾದಿಸಿದ ಒಂಬತ್ತು ಕಥೆಗಳಿವೆ. ಕವಿಯಾಗಿ, ನಾಟಕಕಾರರಾಗಿ, ಕಥೆಗಾರರಾಗಿ ತೆಲುಗಿನಲ್ಲಿ ಪ್ರಸಿದ್ಧರಾಗಿರುವ ಇಂಗ್ಲೀಷ್ ಪ್ರಾಧ್ಯಾಪಕ ಡಾ. ಮಧುರಾಂತಕರಿ ನರೇಂದ್ರ ಅವರ 'ಕುಂಭಮೇಳಾ' ಕಥಾಸಂಕಲನವನ್ನು ಅದೇ ಹೆಸರಿನಲ್ಲಿ ಕನ್ನಡಿಸಲಾಗಿದೆ. ಕೆಳಸ್ತರದ, ಕೂಲಿಕಾರರ, ಭಿಕ್ಷುಕರ, ಅಲೆಮಾರಿಗಳ, ಮಧ್ಯಮ ವರ್ಗದವರ ತೊಳಲಾಟ, ಮಾನಸಿಕ ಗೊಂದಲ, ಆತಂಕ, ಉದ್ವೇಗಗಳನ್ನು ಕಣ್ಣಿಗೆ ಕಟ್ಟುವಂತೆ ಇಲ್ಲಿನ ಕಥೆಗಳಲ್ಲಿ ಚಿತ್ರಿಸಲಾಗಿದೆ.	
47.	51.	ಕನ್ನಡ ನುಡಿಯರಿಮೆಯ ಇಣುಕುನೋಟ	ಸಂಕೀರ್ಣ	ಡಿ.ಎನ್. ಶಂಕರ ಭಟ್	ಡಾ. ಡಿ.ಎನ್.ಶಂಕರ ಭಟ್ ಮುಂಗರವಳ್ಳಿ, ಭೀಮನಕೋಣೆ ಅಂಚೆ, ಹೊನ್ನೆಸರ, ಸಾಗರ–577417	128	120	ವಿಜಯಕರ್ನಾಟಕದಲ್ಲಿ ಎಲ್ಲರ ಕನ್ನಡ ಎಂಬ ಹೆಸರಿನಲ್ಲಿ ಪ್ರಕಟವಾದ ಒಟ್ಟು ಮೂವತ್ತೆಂಟು ಅಂಕಣ ಬರಹಗಳು ಇಲ್ಲಿ ಸೇರಿಸಿ ಕೊಡಲಾಗಿದೆ. ಕನ್ನಡವನ್ನು ವರ್ತಮಾನ ಮತ್ತು ಭವಿಷ್ಯತ್ತಿಗೆ ಸಜ್ಜುಗೊಳಿಸುವುದಕ್ಕಾಗಿ ಕನ್ನಡವೆಂದರೇನು, ಅದರ ಸೊಗಡೇನು, ಹರವು ಏನು, ಕಸುಬು ಏನು, ಮಾತು ಬದಲಾಗುವುದು ಹೇಗೆ ಇತ್ಯಾದಿಗಳ ಬಗ್ಗೆ ಕನ್ನಡಿಗರಲ್ಲಿ ಅರಿವನ್ನು ಉಂಟುಮಾಡಬೇಕಾದದ್ದಿದೆ ಎಂಬ ಆಶಯವನ್ನು ಹೊತ್ತು ವಿಚಾರದ ಬೆಳಕು ಚಲ್ಲುವ ಬರಹಗಳನ್ನು ಈ ಹೊತ್ತಗೆಯಲ್ಲಿ ಕೊಡಲಾಗಿದೆ.	
48.	52.	ಕನ್ನಡ ಬರಹದ ಸೊಲ್ಲರಿಮೆ–4	ವ್ಯಾಕರಣ ಶಾಸ್ತ್ರ ಸಾಹಿತ್ಯ	ಡಿ.ಎನ್. ಶಂಕರ ಭಟ್	ಡಾ. ಡಿ.ಎನ್.ಶಂಕರ ಭಟ್ ಮುಂಗರವಳ್ಳಿ, ಭೀಮನಕೋಣೆ ಅಂಚೆ, ಹೊನ್ನೆಸರ, ಸಾಗರ–577417	1316	220	ಕನ್ನಡಕ್ಕೆ ಕನ್ನಡದ್ದೇ ಆದ ವ್ಯಾಕರಣವೊಂದನ್ನು ಕಟ್ಟಿಕೊಡುವ ದಿಶೆಯಲ್ಲಿ ಶಂಕರಭಟ್ಟರ ನಾಲ್ಕನೆಯ ಕೃತಿ ಇದು . ಇದರಲ್ಲಿ ಆಡುಪದಗಳು, ತೋರುಪದಗಳು ಎಂದು ಎರಡು ಭಾಗಗಳಿವೆ. ಮೊದಲನೇ ಭಾಗದಲ್ಲಿ ಸರ್ವನಾಮಗಳ ಬಳಕೆ, ನಾಮಪದಗಳು ಮತ್ತು ಸರ್ವನಾಮಗಳ ಸಂಬಂಧವ್ಯತ್ಯಾಸ ಇತ್ಯಾದಿಗಳನ್ನು ತಿಳಿಸಲಾಗಿದೆ. ಎರಡನೆಯ ಭಾಗದಲ್ಲಿ ತೋರುಪದಗಳ ವಿವಿಧ ಬಗೆಗಳು, ಪ್ರಯೋಗದ ವೈಶಿಷ್ಟ್ಯಗಳನ್ನು ವಿವರಿಸಲಾಗಿದೆ.	





49.	53.	ಕಲಾಗುರು ಆರ್.ಎಂ. ಹಡಪದ್	ವ್ಯಕ್ತಿ ಚಿತ್ರ	ಸಾಂ.ಕಂ ಗೋವರ್ಧನ	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು-560 019 (080-26609343)	76	45	ನಾಡಿನ ಚಿತ್ರ ಕಲೆಯ ಪ್ರವರ್ತಕರು ಕಲಾಗುರು ಆರ್.ಎಂ. ಹಡಪದರು ಕೆನ್ ಕಲಾ ಶಾಲೆ ಸ್ಥಾಪಿಸಿ, ಆ ಮೂಲಕ ವಿದ್ಯಾರ್ಥಿ- ಯುವ ಜನರಲ್ಲಿ ಚಿತ್ರಕಲೆಯ ಬಗ್ಗೆ ಆಸಕ್ತಿ ಮೂಡಿಸಿದವರು. ಅವರ ಜೀವನ ಮತ್ತು ಸಾಧನೆಯನ್ನು ಪರಿಚಯಿಸಿಕೊಡುವ ಕಿರುಪುಸ್ತಕ, ಹಡಪದ್ ಅವರ ಅಪೂರ್ವ ಕಲಾಕೃತಿಗಳನ್ನು ಕಟ್ಟಿರುವುದು ಅಪೇಕ್ಷಣೀಯವಾಗಿದೆ.	
50.	54.	ಬಿ.ಎಸ್.ಎಸ್. ಕೌಶಿಕ್	ವ್ಯಕ್ತಿ ಚಿತ್ರ	ಎಂ.ಡಿ. ಕೌಶಿಕ್	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು-560 019 (080-26609343)	64	45	ಗಮಕಿ ಕೌಶಿಕ್ ಅವರ ಜೀವನ ಚರಿತ್ರೆ / ವ್ಯಕ್ತಿಚಿತ್ರ, ಕಲಾವಿದರೊಬ್ಬರ ಬದುಕಿನ ಹಿರಿಮೆ ಗರಿಮೆಗಳು, ಏಳು ಬೀಳುಗಳು, ಮನೋ ತುಮುಲಗಳು, ಭಾವೋದ್ವೇಗಗಳನ್ನು ಕುರಿತ ಮನಕಲಕುವ ಚಿತ್ರಣ ಈ ಪುಸ್ತಕದಲ್ಲಿದೆ. ಸಾಂಸ್ಕೃತಿಕ ಇತಿಹಾಸವನ್ನು ದಾಖಲಿಸುವ ಭಾವಚಿತ್ರಗಳಿವೆ.	
51.	55.	ಡಾ. ಬಿ.ಟಿ. ಲಲಿತಾ ನಾಯಕ್	ವ್ಯಕ್ತಿ ಚಿತ್ರ	ಡಾ.ಎಂ. ರವಿನಾಯಕ್	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು-560 019 (080-26609343)	92	60	ಹಿಂದುಳಿದ ಲಂಬಾಣಿ ಜನಾಂಗದಲ್ಲಿ ಹುಟ್ಟಿ ಬೆಳೆದು ಶೈಕ್ಷಣಿಕ ಶಿಸ್ತಿನೊಳಗೆ ಉನ್ನತ ಶಿಕ್ಷಣವನ್ನೇನೂ ಪಡೆಯದೆ ತಮ್ಮ ಜೀವನಾನುಭವಗಳನ್ನೇ ಶಿಕ್ಷಣವನ್ನಾಗಿ ರೂಪಿಸಿಕೊಂಡ ಬಹುಮುಖ ಸಾಧನೆಗೈದಿರುವ ಲೇಖಕಿ ಲಲಿತಾ ನಾಯಕ್ ಇವರ ಜೀವನ ಮತ್ತು ಸಾಧನೆಯನ್ನು ಪರಿಚಯಿಸುವ ಕೃತಿ ಇದು.	
52.	56.	ಬಿ.ವಿ. ರಾಮಮೂರ್ತಿ	ವ್ಯಕ್ತಿ ಚಿತ್ರ	ಎಸ್. ವೆಂಕಟೇಶ್	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು-560 019 (080-26609343)	84	60	ಇವರು ಉತ್ತಮ ವ್ಯಂಗ್ಯಚಿತ್ರಕಾರರು, ನೂರು ಮಾತು ಹೇಳಲಾಗದ ಮಾತುಗಳನ್ನು ತನ್ನ ಒಂದು ಚಿತ್ರದ ಮೂಲಕ ಹೇಳ ಬಲ್ಲರು. ಇಂತಹ ಪ್ರತಿಭಾನ್ವಿತ ವ್ಯಂಗ್ಯಚಿತ್ರಕಾರ ಬಿ.ವಿ. ರಾಮಮೂರ್ತಿ ಅವರ ಜೀವನ ಮತ್ತು ವ್ಯಕ್ತಿತ್ವದ ಚಿತ್ರಣವನ್ನು ಅಧ್ಯಯನ ಶೀಲ ಮನೋಭೂಮಿಕೆಯಲ್ಲಿ ನೀಡುವ ಕೃತಿ ಇದು. ರಾಮಮೂರ್ತಿ ಅವರ ವ್ಯಂಗ್ಯಚಿತ್ರಗಳು ಮತ್ತು ಸಾಧನೆಯ ಸಂಗ್ರಹಕ್ಕಾಗಿ ರಾಮಮೂರ್ತಿ ಅವರ ಪತ್ನಿ, ಸಹೋದ್ಯೋಗಿಗಳು ಮತ್ತು ಮಿತ್ರರನ್ನೂ ಆಶ್ರಯಿಸಿದ್ದಾರೆ. ರಾಮಮೂರ್ತಿಯವರ ಕಲಾಸೃಷ್ಟಿಯ ಪ್ರೇರಣೆಗಳ, ನೆಲೆಗಳನ್ನು ಅರಿಯುವಲ್ಲಿ ಈ ಕೃತಿ ಸಹಕಾರಿಯಾಗುತ್ತದೆ.	
53.	57.	ಕಂಪ್ಯೂಟರ್ ಕನ್ನಡ ಕೆ.ಪಿ. ರಾವ್	ವ್ಯಕ್ತಿ ಚಿತ್ರ	ಟಿ.ಜಿ. ಶ್ರೀನಿಧಿ	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು-560 019 (080-26609343)	56	45	ಕೆ.ಪಿ.ರಾವ್ ಕಂಪ್ಯೂಟರಿಗೆ ಕನ್ನಡ ಕಲಿಸಿದ ಮಹಾನ್ ವ್ಯಕ್ತಿ ಇವರು ಡಿ.ಜಿ.ಟಿಯಲ್ ಲೋಕದಲ್ಲಿ ಕನ್ನಡ ಹುಲುಸಾಗಿ ಬೆಳೆಯಲು ಕಾರಣರಾದವರು. ಇವರ ವ್ಯಕ್ತಿತ್ವ ಚಿತ್ರಣ ಈ ಕೃತಿಯಲ್ಲಿದೆ.	

54.	58.	ದಾಶರಥಿ ದೀಕ್ಷಿತ್	ವ್ಯಕ್ತಿ ಚಿತ್ರ	ಲೋಕನಾಥ್ ದೀಕ್ಷಿತ್	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು–560 019 (080–26609343)	56	45	ನಾಟಕಕಾರ, ಹಾಸ್ಯ ಬರಹಗಾರ, ನಾಟಕ ತರಬೇತುದಾರರು, ಸಾಹಿತಿ ಶ್ರೀ ದಾಶರಥಿ ದೀಕ್ಷಿತ್ ಅವರ ಜೀವನ ಮತ್ತು ಸಾಧನೆ ಕುರಿತು ಪರಿಚಯಿಸುವ ಪುಸ್ತಕ ಇದು. ಭಾವಚಿತ್ರಗಳು, ವಂಶವೃಕ್ಷ, ಕೃತಿಗಳ ಪಟ್ಟಿ, ಬದುಕಿನ ಕೆಲವು ಮೈಲಿಗಲ್ಲುಗಳ ದಾಖಲೆಗಳೂ ಲಭ್ಯ.	
55.	59.	ಕಿ.ರಂ. ನಾಗರಾಜ್	ವ್ಯಕ್ತಿ ಚಿತ್ರ	ಎಲ್.ಎನ್. ಮುಕುಂದರಾಜ್	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು–560 019 (080–26609343)	88	45	ಹೆಸರಾಂತ ಚಿಂತಕ ಮತ್ತು ವಿಮರ್ಶಕ, ನೂರಾರು ಸಾಹಿತ್ಯಾಸಕ್ತರನ್ನು ರೂಪಿಸಿದ ನೆಚ್ಚಿನ ಪ್ರಾಧ್ಯಾಪಕ ಕಿ.ರಂ. ನಾಗರಾಜ ಅವರ ಜೀವನ ಚಿತ್ರ ಮತ್ತು ವ್ಯಕ್ತಿಚಿತ್ರವನ್ನು ಕಡೆದು ನಿಲ್ಲಿಸುವ ಉತ್ಸಾಹಪೂರ್ಣ ಭಾಷಾ ಶೈಲಿಯ ಪುಸ್ತಕ ಕಿ.ರಂ. ನಾಗರಾಜ ಅವರನ್ನು ಚಿತ್ರಿಸುವ ನೆಪದಲ್ಲಿ ಒಂದು ಹಂತದ ಭಾಷಾ ಚಳುವಳಿ ಮತ್ತು ಸಾಹಿತ್ಯ ಚಳುವಳಿಯ ಚರಿತ್ರೆಯನ್ನೂ ಕಟ್ಟಿಕೊಡುತ್ತದೆ.	
56.	60.	ಡಾ. ಕೆ. ಉಲ್ಲಾಸ ಕಾರಂತ	ವ್ಯಕ್ತಿ ಚಿತ್ರ	ಸುಮಂಗಲ ಎಸ್.	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು–560 019 (080–26609343)	80	45	ಹುಲಿಯನ್ನು ಅದರ ವನ್ಯ ಪರಿಸದಲ್ಲೇ ಅಧ್ಯಯನ ಮಾಡಿದ ಕೀರ್ತಿ ಶ್ರೀ ಕೆ. ಉಲ್ಲಾಸ ಕಾರಂತರದಾಗಿದೆ. ಹುಲಿಯ ರೇಡಿಯೋ ಕಾಲರ್ ಅಧ್ಯಯನ, ಕ್ಯಾಮರಾ ಟ್ರಿಮಿಂಗ್ ವಿಧಾನಗಳನ್ನು ನಿರರ್ಗಳವಾದ ಕನ್ನಡದಲ್ಲಿ ವಿವರಿಸಿದ ಏಕೈಕ ಕನ್ನಡಿಗ ಇವರು. ಇವರ ವ್ಯಕ್ತಿತ್ವ ಚಿತ್ರಣ ಈ ಕೃತಿ.	
57.	61.	ಪದ್ಮಭೂಷಣ, ಸಂಗೀತ ಸಾಮ್ರಾಟ್ ಆರ್.ಕೆ. ಶ್ರೀಕಂಠನ್	ವ್ಯಕ್ತಿ ಚಿತ್ರ	ಕೆ. ಮುರಳಿಧರ	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು–560 019 (080–26609343)	74	45	ಮೇರು ಸಾಧನೆಗೈದು ಸಂಗೀತ ಕಲ ಪ್ರಪಂಚಕ್ಕೆ ತಮ್ಮದೇ ಆದ ಸದೃಡ ಹೆಜ್ಜೆ ಇಟ್ಟು 94ರ ಇಳಿವಯಸ್ಸಿನಲ್ಲೂ ಕಲಾ ಕೋವಿದರಾಗಿ, ಪ್ರತಿಷ್ಠಿತ ವೇದಿಕೆಗಳಲ್ಲಿ ಹಾಡುತ್ತಾ ವಿಜೃಂಭಿಸುತ್ತಿರುವ ಮಹಾಸಾಧಕರು ಶ್ರೀ ಆರ್.ಕೆ. ಶ್ರೀಕಂಠನ್ ಇವರ ಜೀವನ ಮತ್ತು ಕಲಾ ಸೇವೆಯ ಪರಿಚಯ ಈ ಕೃತಿಯ ಓದಿನಿಂದ ಉಚಿತವಾಗುತ್ತದೆ.	
58.	62.	ರಾಗಿ ಲಕ್ಷ್ಮಣಯ್ಯ	ವ್ಯಕ್ತಿ ಚಿತ್ರ	ಡಾ. ಶರಡಿ ಬಸವೇಶ್ವರ ಅಂಗಡಿ	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು–560 019 (080–26609343)	76	45	ರಾಗಿತಳಿಯ ಏಳ್ಗೆಗೆ ಅಹರ್ನಿಶಿ ಶ್ರಮಿಸಿದ ಲಕ್ಷ್ಮಣಯ್ಯ ಅಂತಹ ನೂರ್ಮಡಿ ಗೌರವಕ್ಕೆ ಅರ್ಹರು. ಶ್ರೀ ಸಾಮಾನ್ಯ ಪರಿಸರದಿಂದ ಬಂದವರಾದರೂ ಅಸಾಮಾನ್ಯ ಸಾಧನೆ ಮಾಡಿ ವ್ಯವಸಾಯ ವಿಜ್ಞಾನದಲ್ಲಿ ಹೆಸರಾದವರು. ಇವರ ಸಾಧನೆಯ ಕಿರುಪರಿಚಯ ಮಾಡಿಕೊಡುವ ಕೃತಿ ಇದು.	
59.	63.	ಡಾ. ಎಚ್. ಎಸ್. ದೊರೆಸ್ವಾಮಿ	ವ್ಯಕ್ತಿ ಚಿತ್ರ	ಈ. ಬಸವರಾಜು	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು–560 019 (080–26609343)	82	60	ಸ್ವಾತಂತ್ರ್ಯ ಹೋರಾಟಗಾರರಾದ, ಸಮಾಜ ಸುಧಾರಕರಾದ ಸ್ವಾತಂತ್ರ್ಯಾನಂತರ ಭಾರತದ ರಾಜಕಾರಣಕ್ಕೆ ಸೂಕ್ಷ್ಮ ಪ್ರತಿಕ್ರಿಯೆ ತೋರಿಸುತ್ತಾ ಬಂದಿರುವ ಕ್ರಿಯಾಶೀಲ ಚೇತನ ಡಾ. ದೊರೆಸ್ವಾಮಿ ಅವರ ಸಂಕ್ಷಿಪ್ತ ಜೀವನ ಚಿತ್ರ ಇಲ್ಲಿದೆ. ಬದುಕಿನ ದೊರೆಸ್ವಾಮಿ ಅವರ ಬಹು ಆಯಾಮದ ಸೇವಾ ಜೀವನದ ದಾಖಲೆ ಈ ಪುಸ್ತಕ	



60.	64.	ಚಿಂದೋಡಿ ಲೀಲಾ	ವ್ಯಕ್ತಿ ಚಿತ್ರ	ಸರಸ್ವತಿ ಅರುಣ್‌ಕುಮಾರ್	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು–560 019 (080–26609343)	58	60	ಟಿ.ವಿ. ಸಿನಿಮಾಗಳ ಭರಾಟೆಯಲ್ಲಿಯೂ ವೃತ್ತಿ ರಂಗಭೂಮಿಯ ಕಲಾವಿದರಾಗಿ ತಮ್ಮ ಅಸ್ತಿತ್ವಕ್ಕಾಗಿ ನಡೆಸುವ ಹೋರಾಟದಿಂದ ಹಾಗೂ ಹಲವಾರು ತೊಡಕುಗಳ ನಡುವೆಯೂ ಪ್ರೇಕ್ಷಕರನ್ನು ನಿರಂತರವಾಗಿ ರಂಜಿಸುವ ಸಾಹಸದಿಂದ ಎಲ್ಲರ ಮನೆ–ಮನಗಳ ಗೆದ್ದ ಮಹಾನ್ ಕಲಾವಿದೆ ಚಿಂದೋಡಿ ಲೀಲಾ. ಇವರ ಜೀವನ ಚಿತ್ರಣ ಈ ಕೃತಿಯ ಉದ್ದೇಶ.	
61.	65.	ಶಾ.ಮಂ. ಕೃಷ್ಣರಾಯರು	ವ್ಯಕ್ತಿ ಚಿತ್ರ	ಡಾ. ವಿರಾದ ಶ್ರೀನಿವಾಸ	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು–560 019 (080–26609343)	62	45	ಚಿಕ್ಕಂದಿನಿಂದಲೇ ಗೋವಾದಲ್ಲಿ ನೆಲೆನಿಂತು ಕನ್ನಡ ಜಾಗೃತಿ ಮೂಡಿಸಿ, ಭಾಷಾ ಬಾಂಧವ್ಯಕ್ಕೆ ಸೇತುವಾಗಿ, ಗಡಿನಾಡ ಸಮಸ್ಯ ಪರಿಹರಿಸಲು ಪರಿಶ್ರಮಿಸಿ, ಕನ್ನಡ–ಸಂಸ್ಥೆಗಳನ್ನು ಗೋವಾದಲ್ಲಿ ಹುಟ್ಟಿಹಾಕುವ ಮೂಲಕ ಸಂಘಟಕರಾಗಿ, ಸಾಹಿತಿಯಾಗಿ ಕನ್ನಡ ಸೇವೆಗೈದವರು. ಇವರ ಪರಿಚಯ ಈ ಕೃತಿಯ ಮೂಲಕ ಆಗುತ್ತದೆ.	
62.	66.	ನಾಡಿಗೇರ ಕೃಷ್ಣರಾಯರು	ವ್ಯಕ್ತಿ ಚಿತ್ರ	ಪ್ರತಿಭಾ ನಾಡಿಗೇರ	ಉದಯಭಾನು ಕಲಾ ಸಂಘ (ನೋಂ.) ಉದಯಭಾನು ಉನ್ನತ ಅಧ್ಯಯನ ಕೇಂದ್ರ, ಗವಿಪುರ ಸಾಲುಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು–560 019 (080–26609343)	72	45	ಹಾಸ್ಯ ಲೇಖಕರ ಪಂಕ್ತಿಯಲ್ಲಿ ನಾಡಿಗೇರ ಕೃಷ್ಣರಾಯರು ಒಬ್ಬರು. ಹಾಸ್ಯ ಸಾಹಿತ್ಯ ದ್ವಿತೀಯ ಸಾಹಿತ್ಯವೆಂದು ಪರಿಗಣಿಸಲ್ಪಡುವ ಕಾಲದಲ್ಲಿ ನಾಡಿಗೇರರು ನೂರಾರು ಹಾಸ್ಯ ಲೇಖನಗಳನ್ನು ಬರೆದು ಸಾಹಿತ್ಯ ಪ್ರಕಾರಕ್ಕೆ ಉನ್ನತ ಸ್ಥಾನ ದೊರಕಿಸಿಕೊಟ್ಟವರು. ಇವರ ಬದುಕು ಮತ್ತು ಸಾಧನೆಯ ಪಕ್ಷಿನೋಟ ಈ ಕೃತಿಯಲ್ಲಿದೆ. ನಾಡಿಗೇರರ ಜೀವನದ ಮೈಲಿಗಲ್ಲುಗಳ ಪಟ್ಟಿ, ಅವರ ಎಪ್ಪತ್ತು ಕೃತಿಗಳ ಪಟ್ಟಿ ಇದೆ. ಕೆಲವು ಭಾವಚಿತ್ರಗಳನ್ನು ಸೇರಿಸಿದೆ.	
63.	67.	ದೇವರ ಜೋಳಿಗೆ	ಸಣ್ಣ ಕಥೆ	ಫಕೀರ (ಶ್ರೀಧರ ಬನವಾಸಿ)	ಪಂಚಮಿ ಮೀಡಿಯಾ ಪಬ್ಲಿಕೇಷನ್ಸ್, #375/15, ಕೆಂಪೇಗೌಡ ನಗರ, 1ನೇ ಮೈನ್, 8ನೇ ಕ್ರಾಸ್, ಮಾಗಡಿ ಮುಖ್ಯ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು–91 (9739561334 / 9242744854)	192	150	ವಿವಿಧ ಪ್ರಾಂತ್ಯಗಳ 14 ವಿಶಿಷ್ಟ ಕಥೆಗಳು ಈ ಸಂಕಲನದಲ್ಲಿ ಅಡಕವಾಗಿವೆ. ಸಂಪಾದಕರು ಈ ಜೋಳಿಗೆಯೆಂಬ ಸಂಕಲನಕ್ಕೆ ಉತ್ತಮವಾದ ಕಥೆಗಳನ್ನೇ ಆರಿಸಿ ತುಂಬಿದ್ದಾರೆ.	
64.	69.	ವೈಶಾಲಿ ಕಾಸರವಳ್ಳಿ ಸಂಕಥನ	ಜೀವನ ಚರಿತ್ರೆ	ನಿಖಿತಾ ಅಡವೀಶಯ್ಯ	ಪಂಚಮಿ ಮೀಡಿಯಾ ಪಬ್ಲಿಕೇಷನ್ಸ್, #375/15, ಕೆಂಪೇಗೌಡ ನಗರ, 1ನೇ ಮೈನ್, 8ನೇ ಕ್ರಾಸ್, ಮಾಗಡಿ ಮುಖ್ಯ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು–91 (9739561334 / 9242744854)	128	110	ಚಿತ್ರನಟಿ ವೈಶಾಲಿ ಅವರ ಜೀವನ ಕಥೆ ಅವರಿಂದಲೇ ನಿರೂಪಿತವಾಗಿರುವ ವಿಶಿಷ್ಟ ಬರಹದ ಪುಸ್ತಕ, ಹದಿನೈದು ಅಧ್ಯಾಯಗಳಲ್ಲಿ ರೂಪಿತವಾಗಿದೆ. ಹೆಸರಿಗೆ ತಕ್ಕಂತೆ ಕಲಾಬದುಕಿನ ಸಂಕಥನ ಇಲ್ಲಿದೆ. ಸಾಧಕ ಜೀವನದ ಹೋರಾಟಗಳ ಸೋಲು ಗೆಲುವಿನ ರೋಚಕ ಚಿತ್ರಣ ಆಕರ್ಷಕ ಭಾಷೆಯಲ್ಲಿ ನಿರೂಪಿತವಾಗಿದೆ.	




65.	70.	ಮಾಧ್ಯಮ ಶೋಧ	ಸಂಕೀರ್ಣ	ಸಿಬಂತಿ ಪದ್ಮನಾಭ ಕೆ.	ಪಂಚಮಿ ಮೀಡಿಯಾ ಪಬ್ಲಿಕೇಷನ್ಸ್, #375/15, ಕೆಂಪೇಗೌಡ ನಗರ, 1ನೇ ಮೈನ್, 8ನೇ ಕ್ರಾಸ್, ಮಾಗಡಿ ಮುಖ್ಯ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು–91 (9739561334 / 9242744854)	160	130	ಮುದ್ರಣ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಕ್ಕೆ ಸಂಬಂಧಿಸಿದ ಮಾಹಿತಿಯನ್ನೊಳಗೊಂಡ ಅಂಕಣಗಳ ಬರಹಗಳ ಸಂಕಲನ – ಮೂವತ್ತೈದು ಲೇಖನಗಳಿವೆ. ಒಂದೇ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳಿರುವ ಈ ಪುಸ್ತಕ ಪತ್ರಿಕೋದ್ಯಮ ಶಿಕ್ಷಣಕ್ಕೆ ಉಪಯುಕ್ತ ಅನುಭವಾಧಾರಿತ ಚಿಂತನ ಪ್ರಧಾನ ಪರಾಮರ್ಶನ ಗ್ರಂಥವಾಗಿದೆ. ಕಾಲ ಹಾಗೂ ಜಾಗದ ಮಿತಿಗೆ ಒಳಪಟ್ಟು ಬರೆದ ಅಂಕಣ ಬರಹಗಳು ಇವಾದರೂ ಎಲ್ಲ ಕಾಲಕ್ಕೂ ಚರ್ಚಿಸಲೇ ಬೇಕಾದ ವಿಷಯಗಳನ್ನು ಒಳಗೊಂಡಿವೆ.	
66.	71.	ನೀತಿ ಕಥಾಮಾಲೆ	ಮಕ್ಕಳ ಸಾಹಿತ್ಯ	ಕೆ.ವಿ. ವೇಣುಗೋಪಾಲ್	ರಂಗಪ್ರಿಯ ಪ್ರಕಾಶನ 153, 1ನೇ ಮುಖ್ಯರಸ್ತೆ, ಗೋವಿನಾಯಕನಹಳ್ಳಿ, ಕುಮಾರಸ್ವಾಮಿ ಲೇಔಟ್, 2ನೇ ಹಂತ, ಬೆಂಗಳೂರು–560078 (26667889)	62	60	ಮಕ್ಕಳಿಗಾಗಿ ವಿವಿಧ ಲೇಖಕರು ಬರೆದ ಹದಿನಾರು ನೀತಿ ಕಥೆಗಳು ಈ ಪುಸ್ತಕದಲ್ಲಿ ಸೇರಿವೆ. ಸಾಮಾಜಿಕ ನ್ಯಾಯ, ಮಾನವೀಯ ಮೌಲ್ಯ, ತಾಳ್ಮೆ, ತೃಪ್ತಿ, ಉಪಕಾರ ಸ್ಮರಣೆ ಮುಂತಾದ ವ್ಯಕ್ತಿಗುಣಗಳನ್ನು ವಸ್ತುವಾಗಿಟ್ಟುಕೊಂಡು ರಚನೆಯಾಗಿರುವ ಇಲ್ಲಿನ ಕಥೆಗಳು ವೈವಿಧ್ಯತೆ ಮತ್ತು ಕುತೂಹಲವನ್ನು ಕಾಪಾಡಿಕೊಳ್ಳುತ್ತವೆ.	
67.	72.	ಕರ್ನಾಟಕ ಸಂಗೀತ ಬೋಧಿನಿ ಭಾಗ–1	ಸಂಗೀತ	ಎನ್. ಶಾರದಾ	ಶ್ರೀ ಸಾಯಿ ಸಂಗೀತ್ ಟ್ರಸ್ಟ್ (ರಿ.) 2ನೇ ಕ್ರಾಸ್, ಕಾವೇರಿನಗರ, ಮಂಡ್ಯ	252	200	ಸಂಗೀತದ ಬಗ್ಗೆ ಮೂಲ ಜ್ಞಾನವನ್ನು ತಿಳಿಸುತ್ತದೆ. ಸಂಗೀತಶಾಸ್ತ್ರ ಪ್ರವೇಶಿಕೆ ಎನ್ನಬಹುದು. ಕಲಿಕಾರ್ಥಿಗಳಿಗೆ , ಬೋಧಕರಿಗೆ ಉಪಯೋಗವಾಗುವಂತೆ ಸರಳ ಮತ್ತು ಆತ್ಮೀಯ ಶೈಲಿಯಲ್ಲಿ ಕೃತಿ ರಚನೆಯಾಗಿದೆ. ಸಂಗೀತ ಪರಂಪರೆ, ಪಾರಿಭಾಷಿಕತೆ. ವಾಗ್ಗೇಯಕಾರರ ಜೀವನ ಚರಿತ್ರೆ ಸಂಗೀತಶಾಸ್ತ್ರಕ್ಕೆ ಸಂಬಂಧಪಟ್ಟ ಬೇರೆಬೇರೆ ಭಾಷೆಯ ಕೃತಿಗಳ ಭಾವಾರ್ಥ, ಇತ್ಯಾದಿಗಳನ್ನು ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ.	
68.	73.	ಅಭಿನಯ	ನಾಟಕ	ಗೀತಾ ಕೋಗಲೂರು	ಶ್ರೇಯಸ್ ಪಬ್ಲಿಕೇಷನ್ಸ್, ತರಳಬಾಳು ಬಡಾವಣೆ, ದಾವಣಗೆರೆ –577005	71	50	ಏಕವ್ಯಕ್ತಿ ಅಭಿನಯಕ್ಕಾಗಿ ಬರೆದ ಹದಿನಾರು ರೂಪಕಗಳು, ಐದು ಕಿರುನಾಟಕಗಳು ಸಂಕಲಿತವಾಗಿವೆ. ಶಾಲೆ ಕಾಲೇಜುಗಳ ವಿದ್ಯಾರ್ಥಿಗಳ ಅಭಿನಯ ಕೌಶಲ್ಯದ ಪ್ರದರ್ಶನಕ್ಕಾಗಿ ರಚನೆಯಾದವುಗಳಾದುದರಿಂದ ಇತಿಹಾಸ, ಪುರಾಣಗಳಿಂದ ಆರಿಸಿದ ಜನಪ್ರಿಯ ಪ್ರಸಂಗಗಳನ್ನು ಕುರಿತಿವೆ. ಶಿಕ್ಷಣ, ನೈರ್ಮಲ್ಯ, ಆರೋಗ್ಯ ಮೊದಲಾದ ಸಮಕಾಲೀನ ಪ್ರಚಲಿತ ವಿಚಾರವನ್ನು ಆಧರಿಸಿ ಕಿರುನಾಟಕಗಳು ರಚನೆಯಾಗಿವೆ.	


69.	76.	ಮೀನಾ ಕುಮಾರಿಯ ಶಾಯರಿಗಳು	ಕಾವ್ಯ	ಡಿ.ಆರ್. ತುಕಾರಾಂ	ಡಿ.ಆರ್. ತುಕಾರಾಂ ಜಯನಗರ, ಸಾ: ಮುಧೋಳ, ಜಿ:ಬಾಗಲಕೋಟ (9663274274)	140	150	ಹಿಂದಿ ಪುಸ್ತಕದಲ್ಲಿ ಪ್ರಕಟಿಸಿರುವ ಮೀನಾ ಕುಮಾರಿಯ ಶಾಯರಿಗಳ ಅನುವಾದ ಇಲ್ಲಿದೆ. ಮೂಲತಃ ಕವಿಯಾದ ತುಕಾರಾಂ ಅವರು ದಶಕಗಳ ಕಾಲ ಮೀನಾ ಅವರ ಶಾಯರಿ ಹಾಗೂ ಗಜಲ್‌ಗಳ ಕಾವ್ಯದ ಅನುಸಂಧಾನಕ್ಕೆ ತಮ್ಮನ್ನು ತೊಡಗಿಸಿಕೊಂಡವರು. ಅವುಗಳ ಜೀವಸೆಲೆಯ ಮೂಲವನ್ನು ಶೋಧಿಸಿ ಅವ್ಯಕ್ತ ನಿನಾದಕ್ಕೆ ಮನಸೋತವರು. ಮೂಲ ಕೃತಿಗಳ ಭಾವ–ನಾದ–ಮಾಧುರ್ಯವನ್ನು ತಿಳಿಗನ್ನಡದಲ್ಲಿ ಕಟ್ಟಿಕೊಡುವಲ್ಲಿ ಯಶಸ್ಸುಗಳಿಸಿದ್ದಾರೆ.	
70.	77.	ಹಟ ಮಾಡಿ ಹರದಾರಿ ಹಾಸಿ ಮಲಕೊಂಡಾನ	ಕಾವ್ಯ	ಡಿ.ಆರ್. ತುಕಾರಾಂ	ಡಿ.ಆರ್. ತುಕಾರಾಂ ಜಯನಗರ, ಸಾ: ಮುಧೋಳ, ಜಿ:ಬಾಗಲಕೋಟ (9663274274)	64	60	ಹಟಮಾಡಿ ಹರದಾರಿ ಹಾಸಿ ಮಲಕೊಂಡಾನ ಪ್ರೀತಿ ಪ್ರೇಮ ಕುರಿತ ತ್ರಿಪದಿ, ಚಟುಕ, ಕವಿತೆ ಮಾದರಿಯ ರಚನೆಗಳನ್ನು ಒಳಗೊಂಡ ಕೃತಿ.	
71.	78.	ಗದಾಯುದ್ಧ	ನಾಟಕ	ಡಿ.ಆರ್. ತುಕಾರಾಂ	ಡಿ.ಆರ್. ತುಕಾರಾಂ ಜಯನಗರ, ಸಾ: ಮುಧೋಳ, ಜಿ:ಬಾಗಲಕೋಟ (9663274274)	164	150	ಇದು ರನ್ನನ 'ಸಾಹಸ ಭೀಮ ವಿಜಯಂ' ಕಾವ್ಯದ ನಾಟಕ ರೂಪ. ಕಾವ್ಯವನ್ನು ನಾಟಕ ರೂಪಕ್ಕೆ ಅಳವಡಿಸುವಾಗ ಅದರ ರಂಗ ಪ್ರಯೋಗ ಕುರಿತ ಅತ್ಯಂತ ಸರಳ ವಾಕ್ಯವಿರುವ ನಾಟಕ ಇದಾಗಿದೆ.	
72.	80.	ನುಡಿ ಚಿತ್ರ	ಸಂಶೋಧನೆ ಅಧ್ಯಯನ	ಯು.ಬಿ. ರಾಜಲಕ್ಷ್ಮೀ	ತುಲಾ ಪಬ್ಲಿಕೇಷನ್ಸ್ ಕುಕ್ಕುನಂದೂರ್–576117, ಕಾರ್ಕಳ ತಾ॥, ಉಡುಪಿ ಜಿಲ್ಲೆ (9845514902)	280	200	ಪಿ.ಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಸಂಶೋಧನಾ ಪ್ರಬಂಧ, ಕನ್ನಡ ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ಒಂದು ಪ್ರಕಾರದ ಬರಹಗಳನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಲಾಗಿದೆ. ಪ್ರಸ್ತಾವನೆ, ನುಡಿಚಿತ್ರಗಳ ಉಗಮ, ನುಡಿಚಿತ್ರ ಪ್ರಕಾರಗಳು, ನುಡಿಚಿತ್ರಗಳ ದೃಢೀಕರಣ, ನುಡಿಚಿತ್ರಗಳ ಗುಣಾತ್ಮಕ ವಿಶ್ಲೇಷಣೆ, ಸಮಾರೋಪ, ಅನುಬಂಧ– ಹೀಗೆ ಆರು+ಒಂದು ವಿಭಾಗಗಳಲ್ಲಿ ನಡೆಸಿರುವ ಈ ಅಧ್ಯಯನ ಕಿತ್ತು ಪರಿಶ್ರಮಕ್ಕೆ ಮಾದರಿಯಂತಿದೆ.	
73.	81.	ಕನ್ನಡ ಡಿಂಡಿಮ ! (1–5) – ಸತ್ತಂತಿಹರನು ಬಡಿದೆಚ್ಚರಿಸು	ಸಂಕೀರ್ಣ	ಆನಂದ್ ಜಿ.	ಬನವಾಸಿ ಬಳಗ ಪ್ರಕಾಶನ #93, ಗುರುರಾಯ, 5ನೇ 'ಎ' ಕ್ರಾಸ್, 4ನೇ ಮೇನ್, 3ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು–560 028 (9449977880)	88	60	ಕನ್ನಡಿಗರ ನಿಜಗುರುತು, ಹೊರ ಜಗತ್ತಿನೊಂದಿಗೆ ನಮ್ಮ ಕೊಡು ಕೊಳ್ಳುವಿಕೆ, ನಮ್ಮ ಬದುಕಿನ ಮೇಲೆ ಪ್ರಭಾವ ಬೀರುತ್ತಿರುವ, ನಮ್ಮ ಬದುಕನ್ನು ನಿಯಂತ್ರಿಸುವಂತಿರುವ ಅನೇಕ ಅಂಶಗಳು – ಅವು ಬೀರುತ್ತಿರುವ ಪರಿಣಾಮಗಳು – ಇವೆಲ್ಲವನ್ನೂ ಯಾವುದೇ ತೆರೆಯಿರದೆ ನೋಡುವ ಪ್ರಯತ್ನವನ್ನು ನಲವತ್ತೆರಡು ಬಿಡಿ ಲೇಖನಗಳ ಸಂಕಲನ ಇದಾಗಿದೆ.	 






74.	82.	ಸ್ವತಂತ್ರ ಭಾರತದಲ್ಲಿ ಅತಂತ್ರ ಕರ್ನಾಟಕ	ಸಂಕೀರ್ಣ	ಆನಂದ್ ಜಿ.	ಬನವಾಸಿ ಬಳಗ ಪ್ರಕಾಶನ #93, ಗುರುರಾಯ, 5ನೇ 'ಎ' ಕ್ರಾಸ್, 4ನೇ ಮೇನ್, 3ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು–560 028 (9449977880)	108	100	ಸ್ವಾತಂತ್ರ್ಯಾನಂತರದ ಭಾರತ, ಅದರೊಳಗಿನ ಕರ್ನಾಟಕವನ್ನು ಕುರಿತ ವೈಚಾರಿಕ ಚಿಂತನೆಗಳನ್ನು ಹರಳುಗೊಳಿಸುವ ಪುಸ್ತಕ. ಇಲ್ಲಿ ರಾಜಕೀಯ ಪಕ್ಷಗಳು, ಪ್ರಜಾ ಪ್ರಭುತ್ವ ವಿರೋಧಿ ನೆಲೆಗಳು, ಅಡ್ಡಿ ಅಡಚಣೆಗಳ ಚಿಂತನೆಯ ಒರೆಗಲ್ಲಿಗೆ ಹಚ್ಚುವ ಇಲ್ಲಿನ ಬರವಣಿಗೆ ಹದಗೆಟ್ಟ ವ್ಯವಸ್ಥೆಯನ್ನು ಸರಿಪಡಿಸಲು ಆಗಬೇಕಾದ ಕೆಲಸಗಳ ಬಗ್ಗೆಯೂ ಆಲೋಚಿಸುತ್ತದೆ.	
75.	83.	ಯುಗ ಪ್ರವರ್ತಕ ತಂತ್ರಜ್ಞಾನ	ಜ್ಞಾನ–ವಿಜ್ಞಾನ	ಬೆಸೂರು ಮೋಹನ್ ಪಾಳೇಗಾರ್	ಬೆಸೂರು ಮೋಹನ್ ಪಾಳೇಗಾರ್ 1455/ಸಿ, ಚಾಮುಂಡೇಶ್ವರಿ ದೇವಸ್ಥಾನದ ರಸ್ತೆ, 4ನೆ ತಿರುವು, ಜೆ.ಪಿ. ನಗರ ಅಂಚೆ, ಮಹದೇವಪುರ, ಮೈಸೂರು–570 008	208	125	ಆಧುನಿಕ ಯುಗದ ಪ್ರವರ್ತಕ ಶಕ್ತಿ ಭೌತವಿಜ್ಞಾನ; ಯಂತ್ರಗಳ ಆವಿಷ್ಕಾರ, ಕೈಗಾರಿಕೆ, ಜಲಾಶಯ ನಿರ್ಮಾಣ, ವಿದ್ಯುತ್ ಮುಂತಾದ ಮಹತ್ತರ ಸಾಧನೆಗಳಿಗೆ ಭೌತವಿಜ್ಞಾನ ಕ್ಷೇತ್ರದಲ್ಲಿ ಆದ ಮಹತ್ತರ ಬೆಳವಣಿಗೆಗಳು ಕಾರಣವಾಗಿವೆ. ಇದರ ಹಿಂದಿನ ತಂತ್ರಜ್ಞಾನದ ಇತಿಹಾಸ, ವಾಸ್ತವ, ಭವಿಷ್ಯದ ಅಮೂಲ್ಯ ನಿರೂಪಣೆ ಈ ಕೃತಿಯಲ್ಲಿದೆ. ವಿಜ್ಞಾನ–ತಂತ್ರಜ್ಞಾನವನ್ನು ಕನ್ನಡದಲ್ಲಿ ಪರಿಚಯಿಸುವ ಅಪರೂಪದ ಪುಸ್ತಕಗಳಲ್ಲಿ ಒಂದು.	
76.	84.	ಆಧುನಿಕ ಕೈಗಾರಿಕಾ ವಿಜ್ಞಾನ	ಜ್ಞಾನ ವಿಜ್ಞಾನ	ಬೆಸೂರು ಮೋಹನ್ ಪಾಳೇಗಾರ್	ಬೆಸೂರು ಮೋಹನ್ ಪಾಳೇಗಾರ್ 1455/ಸಿ, ಚಾಮುಂಡೇಶ್ವರಿ ದೇವಸ್ಥಾನದ ರಸ್ತೆ, 4ನೆ ತಿರುವು, ಜೆ.ಪಿ. ನಗರ ಅಂಚೆ, ಮಹದೇವಪುರ, ಮೈಸೂರು–570 008	208	125	ಆಧುನಿಕ ಜಗತ್ತಿನಲ್ಲಿ, ಆಧುನಿಕ ಕೈಗಾರಿಕೆ ಮನುಷ್ಯನ ಜೀವನದ ಎಲ್ಲ ಸ್ತರಗಳಲ್ಲಿ ಅತ್ಯಂತ ಅವಶ್ಯಕವಾದುದು. ಈ ದಿಶೆಯಲ್ಲಿ ಆಧುನಿಕ ಕೈಗಾರಿಕಾ ತಂತ್ರಜ್ಞಾನ, ಯಂತ್ರೋಪಕರಣಗಳ ಪರಿಚಯವನ್ನು ಒದಗಿಸುವ ಪುಸ್ತಕ ಇದಾಗಿದೆ.	
77.	90.	ಋಣ	ಸಣ್ಣಕಥೆ	ಮಧುರಾ ಕರ್ಣಮ್	ಅಕ್ಷಯ ಪ್ರಕಾಶನ 229, 2ನೇ ಅಡ್ಡರಸ್ತೆ, 3ನೇ ಮುಖ್ಯ ರಸ್ತೆ, ಹನುಮಂತನಗರ, ಬೆಂಗಳೂರು–560019	138	80	ಇಲ್ಲಿನ ಕತೆಗಳ ಮೂಲ ಆಶಯ ಮಾನವೀಯತೆ. ಇಲ್ಲಿನ ಧನಾತ್ಮಕ ನಿಲುವುಗಳು, ಆಕಸ್ಮಿಕ ತಿರುವುಗಳು, ವಸ್ತುಗಳ ವಿಷಯ ವೈವಿಧ್ಯತೆ ಬದುಕನ್ನು ಹಸನುಗೊಳಿಸಬೇಕೆನ್ನುವ ಕಾಳಜಿಯಿಂದ ಕೂಡಿವೆ. ಹದಿನೇಳು ಕಥೆಗಳಿವೆ.	
78.	91.	ಗುಂಡ ಪುರಾಣ	ಲಲಿತ ಪ್ರಬಂಧ	ಮಧುರಾ ಕರ್ಣಮ್	ಲಾಜಿಕ್ಸ್ ಇಂಟರ್‌ನ್ಯಾಷನಲ್ 133, 4ನೇ ಅಡ್ಡರಸ್ತೆ, 2ನೇ ಬ್ಲಾಕ್, ವಿಶ್ವಪ್ರಿಯನಗರ, ಬೇಗೂರು ರಸ್ತೆ, ಬೆಂಗಳೂರು–560 068	140	80	ಇದು ಹಾಸ್ಯ ಬರಹಗಳು ಮತ್ತು ಪ್ರಬಂಧಗಳ ಸಂಕಲನ, ದಿನನಿತ್ಯ ನಮ್ಮ ಸುತ್ತಮುತ್ತಲಿನ ಘಟನೆಗಳಲ್ಲಿನ ಸ್ವಾರಸ್ಯಗಳನ್ನು ಗುಂಡ–ಸುಬ್ಬಿಯರ ಮೂಲಕ ಲಘು ಹಾಸ್ಯದ ಮತ್ತು ಲಾಲಿತ್ಯದ ಬರವಣಿಗೆಯಲ್ಲಿ ನಿರೂಪಿಸಲಾಗಿದೆ.	
79.	94.	ಸ್ವತಂತ್ರ ಭಾರತದಲ್ಲಿ ಜನಸಾಮಾನ್ಯರು	ಸಂಕೀರ್ಣ	ಎಂ.ವಿ. ಭಟ್	ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದಕ್ಷಿಣ ಕನ್ನಡ ಜಿಲ್ಲೆ–574150 (0824–2295423)	215	150	ಸಾಮಾಜಿಕ ಅಧ್ಯಯನದ ಹಿನ್ನೆಲೆಯಲ್ಲಿ ರಚನೆಯಾದ ಇಪ್ಪತ್ತೈದು ಲೇಖನಗಳ ಸಂಕಲನ, ಸ್ವಾತಂತ್ರ್ಯ ನಂತರದ ಭಾರತ ಕಂಡ ವಿಭಿನ್ನ ನೆಲೆಗಳ ಸಮಸ್ಯೆಗಳನ್ನು ಕುರಿತ ತೀಕ್ಷ್ಣ ವಿಚಾರ, ಇಲ್ಲಿನ ಬಹಳಷ್ಟು ಪತ್ರಿಕಾ ಬರಹಗಳಾದುದರಿಂದ ಕಾಲಿಕ ಚಿಂತನೆಗಳು ಸಾರ್ವಕಾಲಿಕತೆಗೆ ಹಂಬಲಿಸುತ್ತಿರುವುದನ್ನು ಕಾಣಬಹುದು.	



80.	97.	ಕರ್ನಾಟಕ ಅಭಿವೃದ್ಧಿಯ ಆಯಾಮಗಳು	ಸಂಕೀರ್ಣ	ಸಂ: ಡಾ. ಶಿವರಾಜ್ ಬಡಿಗೇರ್	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ9448900846)	176	150	--	
81.	98.	ಸಮಾನಾಂತರ ರೇಖೆಗಳು	ಸಣ್ಣ ಕಥೆ	ಯೋಗೇಶ್ ಮಾಸ್ಟರ್	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ (9448900846)	104	90	ಐದು ಸಣ್ಣಕಥೆಗಳ ಸಂಕಲನ ಸಮಾನಾಂತರ ರೇಖೆಗಳು, ಕೃತಿಚೋರ, ಪಾತಕಿ, ಆನಂದವನದ ಮರಗಳು, ಆನಂದ ಮಂಗಳ – ಇವು ಆ ಕಥೆಗಳು, ಮನುಷ್ಯ ಸಂಬಂಧ, ಸಾಮಾಜಿಕ ವ್ಯವಸ್ಥೆ, ಮಾನವ ನಡವಳಿಕೆಯ ವಿಶೇಷಗಳು, ವಿರೋಧಾಭಾಸಗಳು ಈ ಕಥೆಗಳ ಮೂಲಸೆಲೆಗಳು.	
82.	99.	ಮಣ್ಣುಮಾಸು	ಕೃಷಿ ವಿಜ್ಞಾನ	ನಾ. ಕಾರಂತ ಪೆರಾಜೆ	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ (9448900846)	152	120	ಮಣ್ಣಿನ ಗುಣ ಲಕ್ಷಣ, ಉಪಯುಕ್ತತೆ, ವ್ಯವಸಾಯಕ್ಕೆ ಮಣ್ಣನ್ನು ಹದಗೊಳಿಸುವ ಬಗೆ, ಮಣ್ಣಿನ ಗುಣಲಕ್ಷಣಗಳಿಗೆ ಹೊಂದುವ ಬೆಳೆ ಇತ್ಯಾದಿ ವಿಚಾರಗಳನ್ನು ವೈಜ್ಞಾನಿಕ ತಿಳುವಳಿಕೆಯ ಆಧಾರದ ಮೇಲೆ ವಿವರಿಸುತ್ತದೆ ಈ ಪುಸ್ತಕ.	
83.	100.	ಅಕ್ಕ	ಕಾವ್ಯ	ಜಿ.ಎಚ್. ಜ್ಯೋತಿನಿಂಗಪ್ಪ	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ (9448900846)	120	100	ಅಕ್ಕಮಹಾದೇವಿಯನ್ನು ಧ್ಯಾನಿಸುತ್ತಾ ಅವಳ ಅನುಭಾವದ ನೆಲೆಗಳನ್ನು ಅನುಸಂಧಾನಿಸುತ್ತಾ ರಚನೆಯಾದ ಎಂಭತ್ತೆಂಟು ಕವಿತೆಗಳ ವಿಶಿಷ್ಟ ಸಂಕಲಕನ, ವಚನಕಾರರ ಶೈಲಿ, ಭಾಷೆ, ಉಪಮೆ ಮೊದಲಾದ ಸರಕುಗಳನ್ನು ಬಳಸಿಕೊಂಡಿದ್ದರೂ ಮುರಿದು ಕಟ್ಟುವ ಪ್ರಯತ್ನದಲ್ಲಿ ಯಶಸ್ಸು ಕಂಡಿವೆ. ಇಲ್ಲಿನ ಕವಿತೆಗಳು; ಓದುಗರನ್ನು ಆಪ್ತವಾಗಿ ಆವರಿಸಿಕೊಳ್ಳುವ ಗುಣವನ್ನು ಪಡೆದಿವೆ.	
84.	101.	ನಾಡಿ ನೀರು ಮತ್ತು ನೆತ್ತರು	ವಿಮರ್ಶೆ	ಡಾ. ಮಾರ್ಷಲ್ ಶರಾಂ	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ (9448900846)	112	100	ಡಾ. ನಾ. ಡಿಸೋಜ ಅವರ ಸಾಹಿತ್ಯ ಕುರಿತ ಹತ್ತು ವಿಮರ್ಶಾ ಲೇಖನಗಳು ಇಲ್ಲಿ ಸಂಕಲನಗೊಂಡಿವೆ. ಡಿಸೋಜ ಅವರ ಸಾಹಿತ್ಯಾವಲೋಕನಕ್ಕೆ ಪೂರಕ ಸಾಮಗ್ರಿಯನ್ನು ವಸ್ತುನಿಷ್ಠವಾಗಿ ಪೂರೈಸುವ ಪ್ರಯತ್ನ ಈ ಕೃತಿ. ಅಲ್ಲಲ್ಲಿ ಕೆಲವು ಒಳನೋಟಗಳನ್ನು ಕೊಡುವ ಮೂಲಕ ತನ್ನ ಅನನ್ಯತೆಯನ್ನು ಸ್ಥಾಪಿಸಿಕೊಳ್ಳುತ್ತದೆ.	
85.	103.	ಸುರಗಿ	ಸಣ್ಣ ಕಥೆ	ಪ್ರಕಾಶ್ ಆರ್. ಕಮ್ಮಾರ್	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ (9448900846)	128	100	ಕವಿಯಾಗಿ, ಕಥೆಗಾರರಾಗಿ ಪ್ರಸಿದ್ಧರಾಗಿರುವ ಪ್ರಕಾಶ್ ಆರ್. ಕಮ್ಮಾರ್ ಅವರ ಹದಿನೈದು ಸಣ್ಣಕಥೆಗಳು ಇಲ್ಲಿ ಸಂಕಲಗೊಂಡಿವೆ. ನಾಡಿನ ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿ ಓದುಗರ ಗಮನ ಸೆಳೆದಿರುವ ಇಲ್ಲಿನ ಕಥೆಗಳು ಒಂದೆಡೆ ಮತ್ತೆ ಲಭ್ಯವಾಗಿವೆ.	




86.	105.	ಯುಗಾದಿ ಒಂದು ಚಿಂತನೆ	ಸಂಕೀರ್ಣ	ಹನುಮಂತ ಅನಂತ ಪಾಟೀಲ್	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ (9448900846)	224	180	ವಿಭಿನ್ನ ವಸ್ತು ಹಾಗೂ ನಿರೂಪಣಾ ಮಾದರಿಯ ಮೂವತ್ತು ಲೇಖನಗಳು ಈ ಕೃತಿಯಲ್ಲಿವೆ. ಸಾಹಿತಿಗಳ, ಸಾಹಿತ್ಯ ಕೃತಿಗಳ, ರಾಷ್ಟ್ರನಾಯಕರ, ರಾಜಕಾರಣಿಗಳ, ಪ್ರಸಿದ್ಧ ಪುಸ್ತಕಗಳ ಪರಿಚಯ ಮಾಡಿಕೊಡುವ ಲೇಖನಗಳಿವೆ. ಹಬ್ಬಗಳ ಮಹತ್ವದ, ಸ್ಥಳೀಯ ಪ್ರತಿಭೆಗಳ ಪರಿಚಯವೂ ಕೆಲವು ಲೇಖನಗಳಲ್ಲಿವೆ. ಸಿನಿಮಾ, ಕ್ರಿಕೆಟ್, ಶಿಕ್ಷಣ – ಸಂಸ್ಕೃತಿ – ಹೀಗೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಸರಳ–ಸಂಕ್ಷಿಪ್ತ ಮಾಹಿತಿಗಳು ಇಲ್ಲಿನ ಲೇಖನಗಳಲ್ಲಿ ಸಿಗುತ್ತವೆ.	
87.	107	ಬಂಕಿಮ ಚಂದ್ರರ ವಿಷವೃಕ್ಷ ಮತ್ತು ಆನಂದಮಠ	ವಿಮರ್ಶೆ	ಡಾ. ಸಣ್ಣರಾಮ	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ (9448900846)	120	100	ಆಧುನಿಕ ಭಾರತೀಯ ಸಾಹಿತ್ಯದಲ್ಲಿ ಸಂಚಲನ ಮೂಡಿಸಿದ ಬಂಗಾಳಿ ಲೇಖಕ ಬಂಕಿಮಚಂದ್ರರ ವ್ಯಕ್ತಿತ್ವ ಮತ್ತು ಬರಹದ ಸತ್ವವನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವ ಒಂದು ಪ್ರಯತ್ನ ಈ ಕೃತಿ. ಬಂಕಿಮರ ವಿಷವೃಕ್ಷ ಮತ್ತು ಆನಂದ ಮಠ ಕಾದಂಬರಿಯೊಡನೆ ಹೋಲಿಸಿ ವಿವೇಚಿಸಿರುವುದು ಯಥೋಚಿತವಾಗಿದೆ.	
88.	108.	ನದಿ ಹರಿಯುತಿರಲಿ	ಲಲಿತ ಪ್ರಬಂಧ	ತಿರುಪತಿ	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ (9448900846)	144	120	ಈ ಸಂಕಲನದಲ್ಲಿ ಇಪ್ಪತ್ತೊಂದು ಪ್ರಬಂಧಗಳಿವೆ. ಶಿಕ್ಷಣ, ಜಾಗೃತಿ, ಸಾಮಾಜಿಕ ಸ್ಥಿತಿಗತಿ ಮತ್ತು ಮಕ್ಕಳ ಕುರಿತ ವಿಚಾರಗಳು ಇಲ್ಲಿನ ಬರಹಗಳಲ್ಲಿ ಒಡಮೂಡಿವೆ. ಸಾಮಾನ್ಯ ಮತ್ತು ಸಾಮಾನ್ಯತೆಯನ್ನು ಮೀರಿದ ವಿಷಯಗಳನ್ನು ತಮ್ಮ ವಿಚಾರ ಮತ್ತು ವಿಮರ್ಶೆಗೆ ಒಳಗು ಮಾಡುತ್ತಾ ಹೋಗುವ ಲೇಖಕರು ಹಲವು ದಿಕ್ಕಿನ ಚಿಂತನ ಲಹರಿಯನ್ನು ಇಲ್ಲಿ ಹರಿಯಬಿಟ್ಟಿದ್ದಾರೆ.	
89.	109.	ಟಾವರ್	ಕಾದಂಬರಿ	ತಿರುಪತಿ	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ (9448900846)	104	90	ಸ್ಥಾವರದ ಅಪಭ್ರಂಶರೂಪ ಟಾವರ್, ಕನ್ನಡಕ್ಕೊಂದು ಹೊಸ ಶಬ್ದದ ಸೇರ್ಪಡೆ. ವಿದ್ಯುತ್ ಸ್ಥಾವರವೇ ಮೊದಲಾದ ಯೋಜನೆಗಳಿಂದ ಭೂಮಿಯನ್ನೂ ಬದುಕನ್ನೂ ಕಳೆದುಕೊಳ್ಳುವ ಹಳ್ಳಿಗಳ ಬವಣೆ ಕಾದಂಬರಿಯ ವಸ್ತು. ಮೂಲತಃ ಹೈದರಾಬಾದ್ ಕರ್ನಾಟಕದ ರಾಯಚೂರು ಜಿಲ್ಲೆಯವರಾದ ಲೇಖಕರು ಆಡಳಿತ ವ್ಯವಸ್ಥೆಯ ದಿಢೀರ್ ಕಾರ್ಯಾಚರಣೆಯ ಬೃಹತ್ ಯೋಜನೆಗಳಿಂದ ನಿರಾಶ್ರಿತರಾದವರ ಬದುಕು, ಹೋರಾಟ, ನಿರಾಶೆ, ನೋವನ್ನು ಈ ಕೃತಿಯಲ್ಲಿ ಅಭಿವ್ಯಕ್ತಿಸಿದ್ದಾರೆ.	



90.	110.	ಗಂಗಮ್ಮ v/s ದುರ್ಗಮ್ಮ	ಪ್ರಬಂಧ	ಡಾ. ಕೆ. ಶ್ರೀಪತಿ ಹಳಗುಂದ	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ (9448900846)	96	70	ಒಂಬತ್ತು ಪ್ರಬಂಧಗಳ ಸಂಕಲನ ಲಲಿತ ಪ್ರಬಂಧ ಪ್ರಕಾರದ ಮಾದರಿಯನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತವೆ. ಮಲೆನಾಡಿನ ಜನಪದದ ಭಾಷೆಯ ಸೊಗಡನ್ನು ಹಿಡಿದಿಡಲು ಹವಣಿಸಿರುವುದು ಈ ಪ್ರಬಂಧಗಳ ವಿಶೇಷ, ಗ್ರಾಮೀಣ ಜನತೆ ಪೇಟೆಯವರಂತಾಗುತ್ತಿರುವ ಪಲ್ಲಟಿತ ಬದುಕಿನ ಸ್ಥಿತ್ಯಂತರಗಳನ್ನು ಚಿತ್ರಿಸುವಲ್ಲಿ ಉತ್ಸಾಹ ತೋರುತ್ತವೆ. ತಮ್ಮ ಸೂಕ್ಷ್ಮ ಅವಲೋಕನಗಳನ್ನು ಲಘು ಹಾಸ್ಯದ ಧಾಟಿಯಲ್ಲಿ ನಿರೂಪಿಸಬಲ್ಲ ಸಾಮರ್ಥ್ಯವನ್ನು ಲೇಖಕರು ಇಲ್ಲಿ ದಾಖಲಿಸಿದ್ದಾರೆ.	
91.	111.	ಕೆಲವು ಕವಿಗಳ ಹಲವು ಕಾವ್ಯದೊಳಗೆ	ವಿಮರ್ಶೆ	ಡಾ. ಕೆ. ಶ್ರೀಪತಿ ಹಳಗುಂದ	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ (9448900846)	96	80	ವಿಮರ್ಶಾ ಕೃತಿ. ಕನ್ನಡದ ಪ್ರಮುಖ ಕಾವ್ಯಗಳು ಮತ್ತು ಭಾವಗೀತೆರಚನೆಕಾರರಲ್ಲಿ ಕೆಲವರ ಕವಿತೆಗಳ ಬಗೆಗೆ ಪ್ರಾಥಮಿಕ ನೆಲೆಯ ಅಭ್ಯಾಸದಿಂದ ಬರೆದ ಎಂಟು ವಿಮರ್ಶಾ ಬರಹಗಳು ಇಲ್ಲಿ ಸಂಕಲನಗೊಂಡಿವೆ. ವಡ್ಡಾರಾಧನೆಯ ಸುಕುಮಾರ ಸ್ವಾಮಿ ಕಥೆ, ಕನಕದಾಸರ ಕಾವ್ಯ, ಷರೀಫರ ಹಾಡುಗಳು, ಕುವೆಂಪು, ಬಿ.ಎಂ.ಶ್ರೀ., ಡಿ.ವಿ.ಜಿ., ಪರಮೇಶ್ವರ ಭಟ್ಟ, ಗೋಕಾಕ್ ಅವರ ಕವಿಗಳನ್ನು ಇಲ್ಲಿ ವಿವೇಚಿಸಲಾಗಿದೆ.	
92.	112.	ಕಲ್ಲು ಸಕ್ಕರೆ	ಸಣ್ಣ ಕಥೆ	ಬಸ್ತಿ ಸದಾನಂದ ಪೈ	ನೇಕಾರ ಪ್ರಕಾಶನ ಗುರುಮಂದಿರ ರಸ್ತೆ, ಸೊರಬ–577429, ಶಿವಮೊಗ್ಗ ಜಿಲ್ಲೆ (9448900846)	200	180	ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ'ದ ಅರವತ್ತೈದು ಪದ್ಯಗಳನ್ನು ಆರಿಸಿಕೊಂಡು ಅವುಗಳ ಭಾವ ಮತ್ತು ಬೋಧನೆಗೆ ಅನುಗುಣವಾಗಿ ರಚಿಸಿದ ಅರವತ್ತೈದು ಕಾಲ್ಪನಿಕ ಕಥೆಗಳ ಸಂಕಲನ ಈ ಕೃತಿ. ಇಲ್ಲಿನ ಕಥೆ ಹೇಳುವ ಕ್ರಮ ಕೂಡ ಬೋಧನೆಯ ರೂಪ ತಾಳಿರುವುದರಿಂದ ನೀತಿಕಥೆಗಳ ಮಾದರಿಯನ್ನು ಪಡೆದುಕೊಂಡಿವೆ. ಡಿ.ವಿ.ಜಿ. ಅವರ ಕಗ್ಗವನ್ನು ಸರಳವಾಗಿ ಸಾಮಾನ್ಯರೂ ಅರ್ಥ ಮಾಡಿಕೊಳ್ಳುವ ಆಶಯದಿಂದ ಈ ಸಂಕಲನ ಪ್ರಕಟವಾಗಿದೆ.	
93.	113.	ಗೀತಲಹರಿ	ಕಾವ್ಯ	ಡಾ. ದೊಡ್ಡರಂಗೇಗೌಡ	ಬಿ.ಆರ್. ಜಗದೀಶ್ ನಂ.6/7, ಕಾಳಿಕಾ ಸೌಧ, ಪೂರ್ಣಯ್ಯ ಛತ್ರದ ರಸ್ತೆ, ಬಳೇಪೇಟೆ ಕ್ರಾಸ್, ಬೆಂಗಳೂರು–560 053	352	225	ತಮ್ಮ ಚಿಂತನ ಬರಹಗಳು ಹಾಗೂ ಕವಿತೆಗಳ ಮೂಲಕ ಈಗಾಗಲೇ ಸಾಕಷ್ಟು ಪ್ರಸಿದ್ಧನಾಗಿರುವ ದೊಡ್ಡರಂಗೇಗೌಡರ ಮತ್ತೊಂದು ಕವನ ಸಂಕಲನ ಇವೆ. ಸುಮಾರು ಮುನ್ನೂರು ಕವಿತೆಗಳ ಮುನ್ನೂರೈವತ್ತು ಪುಟಗಳ ಪುಸ್ತಕ ಇದು. ಮುದ್ರಣಕಲೆ, ಕಾಗದ, ಬೈಂಡಿಂಗ್ ಎಲ್ಲವೂ ಅತ್ಯುತ್ತಮಗುಣದ್ದಾಗಿದೆ. ಕವಿ ಹೃದಯದ ಭಾವಸಂಪದ ಗೀತಾತ್ಮಕವಾಗಿ ಮೂಡಿಬಂದಿದೆ. ಇಲ್ಲಿನ ಗೀತ ಲಹರಿ ಅಲೆಅಲೆಯಾಗಿ ಗಾಯನ ಲಹರಿಯಾಗಿ ಕೇಳಿಬಂದು ರಸಿಕರ ಕಣ್ಮನಗಳನ್ನು ಸೆಳೆಯುವಲ್ಲಿ ಯಶಸ್ವಿಯಾಗುತ್ತದೆ.	

94.	117.	ನಿಮ್ಮ ದೇಹಾರೋಗ್ಯ ನಮ್ಮ ಪರಿಹಾರೋಪಾಯಗಳು	ವೈದ್ಯ ವಿಜ್ಞಾನ	ಡಾ. ವಸಂತ ಅ. ಕುಲಕರ್ಣಿ	ದಿವ್ಯಚಂದ್ರ ಪ್ರಕಾಶನ ನಂ.45, ಪಾಪಣ್ಣನ ತೋಟ, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ, 2ನೇ ಹಂತ, ಬಸವೇಶ್ವರನಗರ, ಬೆಂಗಳೂರು–560 079	240	150	ದೇಹಾರೋಗ್ಯದ ಸಾಮಾನ್ಯ ಜ್ಞಾನ ಮತ್ತು ಸಾಮಾನ್ಯ ಪರಿಹಾರೋಪಾಯಗಳನ್ನು ಒದಗಿಸುವುದು ಕೃತಿಯ ಉದ್ದೇಶ. ಎರಡು ಭಾಗಗಳಾಗಿ ಕೃತಿ ವಿಂಗಡಣೆಯಾಗಿದೆ. ಮೊದಲ ಭಾಗದಲ್ಲಿ ಆರೋಗ್ಯ ಸಮಸ್ಯೆಗಳ ಸುತ್ತಲೂ ಹಬ್ಬಿರುವ ಸಾಮಾಜಿಕ ವೈಚಾರಿಕ ವಿಚಾರಗಳನ್ನು ಚರ್ಚಿಸಲಾಗಿದೆ. ಎರಡನೆಯ ಭಾಗದಲ್ಲಿ ಆರೋಗ್ಯ ಸಮಸ್ಯೆಗಳನ್ನು ಮತ್ತು ಪ್ರಸ್ತುತ ವಿಚಾರಗಳನ್ನು ನೇರವಾಗಿ ಆಪ್ತ ಭಾಷೆಯಲ್ಲಿ ಹೇಳಲಾಗಿದೆ. ಅನುಭವೀ ವೈದ್ಯ ಮತ್ತು ಲೇಖಕ ರಚಿಸಿದ, ಓದಬೇಕಾದ ಪುಸ್ತಕ. ವಯಸ್ಕ ಮನೋರೋಗಗಳ ಜನಸಾಮಾನ್ಯರಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿಯನ್ನು ಮೂಡಿಸಿ ಪ್ರಾಥಮಿಕ ಹಂತದಲ್ಲಿಯೇ ಮನೋರೋಗಗಳನ್ನು ಗುರುತಿಸಿ ಪರಿಹಾರೋಪಾಯಗಳನ್ನು ಪಡೆಯಲು ಸೂಚನೆ ನೀಡುವ ಸಾರ್ಥಕ ಪ್ರಯತ್ನ ಈ ಕೃತಿ. ಸಂಕೀರ್ಣ ಮನೋವಿಜ್ಞಾನವನ್ನು ಸರಳಗೊಳಿಸಿ ಜನಪ್ರಿಯಗೊಳಿಸುವ ದಿಶೆಯಲ್ಲಿ ತುಂಬಾ ಉಪಯುಕ್ತವೆನಿಸಿರುವ ಈ ಕೃತಿ ಪರಿಷ್ಕೃತಗೊಂಡು ಎರಡನೇ ಬಾರಿಗೆ ಮುದ್ರಣವಾಗಿದೆ.	
95.	120.	ಮಾನಸ	ಮನೋ ವಿಜ್ಞಾನ	ಡಾ.ಕೆ.ವಿ. ಅಶೋಕ್ ಪೈ	ದಿವ್ಯಚಂದ್ರ ಪ್ರಕಾಶನ ನಂ.45, ಪಾಪಣ್ಣನ ತೋಟ, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ, 2ನೇ ಹಂತ, ಬಸವೇಶ್ವರನಗರ, ಬೆಂಗಳೂರು–560 079	220	150	ಮಾನಸ ಹಿಂದಿಯಲ್ಲಿ ಗಿರೀಶ್ ಕಾರ್ನಾಡ್ ಅವರ ನಿರ್ದೇಶನದಲ್ಲಿ ದೆಹಲಿ ದೂರದರ್ಶನ ಧಾರವಾಹಿ ಆಗಿ ಜನಪ್ರಿಯತೆ ಗಳಿಸಿದೆ.	
96.	131	ಅಂತರಾಳ	ಕಾವ್ಯ	ಡಾ.ಕೆ.ಬಿ.ಭರತರಾಜು	ಕಣ್ವ ಪ್ರಕಾಶನ ಕಾಲ ಕನಸು, ನಂ.894, 1ನೇ ಮುಖ್ಯ ರಸ್ತೆ, ನಿಸರ್ಗ ಬಡಾವಣೆ, ಚಂದ್ರಾಲೇಔಟ್, ಬೆಂಗಳೂರು–560 072 (98450–5248)	88	60	ನಲತ್ತೆಂಟು ಕವಿತೆಗಳ ಸಂಕಲನ, ಭ್ರಮೆಯಲ್ಲಿ ಬದುಕುವ ಮಂದಿಗೆ ಸುತ್ತಲ ಅನ್ಯಾಯ, ಸುಲಿಗೆ, ಅತ್ಯಾಚಾರ ಮೊದಲಾದ ಆಘಾತಕಾರಿ ವಿದ್ಯಾಮಾನಗಳು ಕಾಣಿಸುವುದಿಲ್ಲವೆ ಎಂದು ಕಲಕುವ ಕವಿ ಜಾಗೃತ ಮನಸ್ಸಿನವರು ಎಂಬದು ಇಲ್ಲಿನ ಕವಿತೆಗಳಿಂದ ಸಾಬೀತಾಗುತ್ತದೆ. ಸದಾಶಯವನ್ನು ಹೊತ್ತ ಕವಿತೆಗಳು ವಿಡಂಬನೆ, ಪ್ರತಿಭಟನೆ, ಸ್ತುತಿ ಮೊದಲಾದ ಭಾವಗಳ ಸಂಗಮ, ವಿಭಿನ್ನ ಅಭಿರುಚಿಯ ಓದುಗರನ್ನು ಕಣಿಸಬಲ್ಲವು.	



97.	133	ಭ್ರಷ್ಟಾಚಾರ ಎಂಬ ಭಗವಂತ	ಸಮಾಜ ಶಾಸ್ತ್ರ	ಪ್ರೊ.ಆರ್.ವಿ.ಹೊರಡಿ	ಕಣ್ವ ಪ್ರಕಾಶನ ಕಾಲ ಕನಸು, ನಂ.894, 1ನೇ ಮುಖ್ಯ ರಸ್ತೆ, ನಿಸರ್ಗ ಬಡಾವಣೆ, ಚಂದ್ರಾಲೇಔಟ್, ಬೆಂಗಳೂರು–560 072 (98450–5248)	104	70	ವಿಚಾರ ಸಾಹಿತ್ಯ ಹತ್ತು ವೈಚಾರಿಕ ಲೇಖನಗಳನ್ನೊಳಗೊಂಡ ಕೃತಿ–ನವುರು ವಿಚಾರ ಸ್ಪಂದನವಿದೆ, ವಸ್ತು ವೈವಿಧ್ಯತೆಯಿದೆ. ಕನ್ನಡ ವಿಚಾರಸಾಹಿತ್ಯಕ್ಕೆ ಉತ್ತಮ ಸೇರ್ಪಡೆ. ಜೀವನಪ್ರೀತಿ, ಆದರ್ಶ ಪಕ್ಷಪಾತ, ಸಾಮಾಜಿಕ ಕಳಕಳಿ, ರಾಷ್ಟ್ರಭವಿಷ್ಯದ ಬಗೆಗೆ ಕಾಳಜಿ, ವಿಶ್ವಶಾಂತಿ, ಮಾನವತಾವಾದ ಶೋಷಣೆ, ಭ್ರಷ್ಟಾಚಾರದ ವಿರುದ್ಧ ಬಂಡಾಯ ಇತ್ಯಾದಿ ಅಂಶಗಳ ಕೃತಿಯ ಮೌಲಿಕತೆಯನ್ನು ಹೆಚ್ಚಿಸಿವೆ.	
98.	134	ಸ್ವಾಮಿವಿವೇಕಾನಂದರು ಕಂಡಂತೆ ಬುದ್ಧ ಹಾಗೂ ಬೌದ್ಧ ಧರ್ಮ	ಧರ್ಮ	ಶಿ.ಚಿ.ಪಾಟೀಲ	ಕಣ್ವ ಪ್ರಕಾಶನ ಕಾಲ ಕನಸು, ನಂ.894, 1ನೇ ಮುಖ್ಯ ರಸ್ತೆ, ನಿಸರ್ಗ ಬಡಾವಣೆ, ಚಂದ್ರಾಲೇಔಟ್, ಬೆಂಗಳೂರು–560 072 (98450–5248)	112	75	ವಿಚಾರ ಸಾಹಿತ್ಯ ಬುದ್ಧನನ್ನೂ ಬೌದ್ಧಧರ್ಮವನ್ನೂ ಕುರಿತ ಸ್ವಾಮಿ ವಿವೇಕಾನಂದರ ವಿಚಾರಗಳ ಸಂಕಲನಗ್ರಂಥ ಇದು. ವಿವೇಕಾನಂದ ಕೃತಿ ಶ್ರೇಣಿಯ ಸಂಪುಟಗಳಲ್ಲಿ ಹಾಗೂ ವಿವೇಕಾನಂದರ ಜೀವನ ಚರಿತ್ರೆಯ ಸಂಪುಟಗಳಲ್ಲಿರುವ ಪ್ರಸ್ತಾಪಗಳನ್ನು ಸೂಕ್ತ ತಲೆಬರಹದಡಿಯಲ್ಲಿ ಸಂಗ್ರಹಿಸಿ, ವಿಷಯವಾರು ವಿಂಗಡಿಸಿಕೊಡಲಾಗಿದೆ . ಏಳು ಅಧ್ಯಾಯಗಳಿವೆ.	
99.	135	ನಿದರ್ಶನ	--	ಎಸ್.ಬಿ.ಜೋಗುರ	ಕಣ್ವ ಪ್ರಕಾಶನ ಕಾಲ ಕನಸು, ನಂ.894, 1ನೇ ಮುಖ್ಯ ರಸ್ತೆ, ನಿಸರ್ಗ ಬಡಾವಣೆ, ಚಂದ್ರಾಲೇಔಟ್, ಬೆಂಗಳೂರು–560 072 (98450–5248)	160	100	ಉತ್ತರ ಕರ್ನಾಟಕದ ಬಯಲುಸೀಮೆಯ ಗ್ರಾಮೀಣ ಪ್ರದೇಶದಲ್ಲಿಯ ಒಂದು ತಲೆಮಾರಿನ ಅವಧಿಯ ಜೀವನ, ನಾಟಕ, ಮಾತಿನ ವೈಚಾರಿ, ಸಂಸ್ಕೃತಿ ಪರಿಸರವನ್ನು ಕಟ್ಟಿಕೊಡುವ ಆಶಯದಿಂದ ಈ ಕಾದಂಬರಿ ಕಥೆ ರೂಪುಗೊಂಡಿದೆ. ಯಾವುದೇ ಭಾಹ್ಯ ನಿರ್ಬಂಧಗಳಿಂದ ಮುಕ್ತವಾಗಿ ಮನೋಕಾಂಕ್ಷಿ ಪರಿಮಿತಿಯ ಎಲ್ಲೆಯೊಳಗೆ ಒಂದು ಕಾಲದ ಬದುಕನ್ನು ಕಲೆಯಾಗಿಸುವ ನೈಪುಣ್ಯ ಓದುಗರ ಗಮನ ಸೆಳೆಯುತ್ತದೆ.	
100.	136	ಇಂತಿ....ನಿನ್ನ ಬಾಪು	ಗಾಂಧಿಯಾನ	ಪದ್ಮಶ್ರೀ ಮಠಪತಿ	ಕಣ್ವ ಪ್ರಕಾಶನ ಕಾಲ ಕನಸು, ನಂ.894, 1ನೇ ಮುಖ್ಯ ರಸ್ತೆ, ನಿಸರ್ಗ ಬಡಾವಣೆ, ಚಂದ್ರಾಲೇಔಟ್, ಬೆಂಗಳೂರು–560 072 (98450–5248)	168	100	ಡಾ. ರಾಜಶೇಖರ ಮಠಪತಿ ಅವರು ಅನುವಾದಿಸಿದ ಗಾಂಧೀ ಪತ್ರಗಳ ಸಂಕಲನ ಈ ಪುಸ್ತಕ, ಗಾಂಧೀವಾದ ಮತ್ತು ಗಾಂಧಿ ಚಿಂತನೆಯ ಅಭಿಮಾನಿಗಳಿಗೆ ಉಪಯುಕ್ತ ಮಾಹಿತಿ ಇಲ್ಲಿ ದೊರೆಯುತ್ತದೆ. ನೂರಾ ಎಂಟು ಪತ್ರಗಳ ಓದು ಇಲ್ಲಿ ಸಾಧ್ಯ.	
101.	137	ಶ್ರೀ ಕೋ.ಚನ್ನಬಸಪ್ಪ (ಕೋಚೆ)	ಕನ್ನಡಿಗನ ಜೀವನ ಚರಿತ್ರೆ	ಚಂದ್ರಶೇಖರ ಪಾಟೀಲ	ಕಣ್ವ ಪ್ರಕಾಶನ ಕಾಲ ಕನಸು, ನಂ.894, 1ನೇ ಮುಖ್ಯ ರಸ್ತೆ, ನಿಸರ್ಗ ಬಡಾವಣೆ, ಚಂದ್ರಾಲೇಔಟ್, ಬೆಂಗಳೂರು–560 072 (98450–5248)	320	200	ಕೋ. ಚೆನ್ನಬಸಪ್ಪನವರು (ಕೋಚೆ) ಅವರು ಅಖಿಲ ಭಾರತ 25ನೇ ಕನ್ನಡ ಸಾಹಿತ್ಯ ಸಮ್ಮೇಳದ ಅಧ್ಯಕ್ಷರಾದ ಸಂದರ್ಭದಲ್ಲಿ ಅಭಿನಂದನ ಗ್ರಂಥ ಸಿದ್ಧವಾದ ಕೃತಿ ಇದು. ಪ್ರಕಾರ ವೈಚಾರಿಕ ನಿಲುವಿನ ಸಾಹಿತಿ. ನಿಖರ ಮಂಡನೆಯ ನ್ಯಾಯವಾದಿ, ಸಮಚಿತ್ರದ ನ್ಯಾಯಮೂರ್ತಿ, ಅಧ್ಯಾತ್ಮಜೀವಿ ಎನಿಸಿಕೊಂಡಿರುವ ಅಪೂರ್ವ ಚೇತನ ಕೋಚೆ ಅವರ ಬದುಕು–ಬರೆಹದ ಹಲವು ಮಗ್ಗುಲುಗಳನ್ನು ಅನೇಕ ಕಣ್ಣುಗಳಿಂದ ಸೆರೆಹಿಡಿಯುವ ಒಂದು ಪ್ರಯತ್ನ ಈ ಕೃತಿ.	

102.	141	ಬಿಸಿಲ ಬಾಗಿನ–1	ಕಥಾ ಸಂಕಲನ	ಅಮರೇಶ ನುಗಡೋಣಿ	ಕಣ್ವ ಪ್ರಕಾಶನ ಕಾಲ ಕನಸು, ನಂ.894, 1ನೇ ಮುಖ್ಯ ರಸ್ತೆ, ನಿಸರ್ಗ ಬಡಾವಣೆ, ಚಂದ್ರಾಲೇಔಟ್, ಬೆಂಗಳೂರು–560 072 (98450–5248)	352	240	ಹೆಸರಾಂತ ಕನ್ನಡ ಕತೆಗಾರ ಶ್ರೀ ಅಮರೇಶ ನುಗಡೋಣಿ ಅವರ ಹದಿನೆಂಟು ಕತೆಗಳು ಕತೆಗಳು ಇಲ್ಲಿ ಸಂಕಲನಗೊಂಡಿವೆ. ಮನುಷ್ಯರನ್ನು, ಮಾನವ ಬದುಕು ಮಾನವಭಾವರ್ಗಾನ್ನು ಕೇಂದ್ರವಾಗಿಸಿಕೊಂಡು, ಕಥೆ ಸಾಮಾಜಿಕವಾಗಿದ್ದೂ ಸಾಮಾಜಿಕವಾಗಿಸಿಕೊಂಡೇ ಕಥೆ ಬರೆಯುವ ಒತ್ತಡದಿಂದ ಬಿಡಿಸಿಕೊಂಡು ಚಿಂತನೆಗಳನ್ನು ವಿಚಾರಗಳನ್ನು ಕಲೆಯಾಗಿಸುವ ಹೊಸ ತಲೆಮಾರಿನ ಪ್ರಜ್ಞಾ ಕಥೆಗಾರ ಕಥೆಗಳಿವು ಎಂಬುದಕ್ಕೆ ಇಲ್ಲಿನ ಕಥೆಗಳಲ್ಲಿ ಸಾಕಷ್ಟು ಪುರಾವೆಗಳಿವೆ.	
103.	144	ಇರುವಷ್ಟು ಕಾಲ... ಇರುವಷ್ಟೇ ಕಾಲ!	ಕಾವ್ಯ	ಡಾ.ರಾಜಶೇಖರ ಮಠಪತಿ	ಕಣ್ವ ಪ್ರಕಾಶನ ಕಾಲ ಕನಸು, ನಂ.894, 1ನೇ ಮುಖ್ಯ ರಸ್ತೆ, ನಿಸರ್ಗ ಬಡಾವಣೆ, ಚಂದ್ರಾಲೇಔಟ್, ಬೆಂಗಳೂರು–560 072 (98450–5248)	112	75	'ರಾಗಂ' ಕಾವ್ಯನಾಮದ ಡಾ. ರಾಜಶೇಖರ ಮಠಪತಿ ಅವರ ಕವನ ಸಂಕಲನ ನಲವತ್ತು ಕವಿತೆಗಳಿವೆ, ಕೊನೆಯಲ್ಲಿ ಮೀನಾಕುಮಾರಿಯವರ ಏಳು ಶಾಯರಿಗಳಿವೆ. ಕವಿತೆಗಳ ವಸ್ತು ಆಶಯಕ್ಕೆ ತಕ್ಕಂತೆ ಪ್ರತಿ ಪುಟದಲ್ಲಿ ರೇಖಾಚಿತ್ರಗಳಿವೆ. ಆಕರ್ಷಕ ವಿನ್ಯಾಸದಲ್ಲಿ ಅಳವಡಿಸಿರುವ ಇಲ್ಲಿನ ಕವಿತೆಗಳು ಲೇಖಕರೇ ಹೇಳುವಂತೆ ಬದುಕಿನ ನಿಜ ಅನುಸಂಧಾನಗಳು.	
104.	146	ಬೃಹತ್ ಕರ್ನಾಟಕದ ಶಿಲ್ಪಾಚಾರಿಯರ ಚರಿತೆ	––	ಕೆ.ಎಸ್.ಕುಮಾರಸ್ವಾಮಿ	ಕಣ್ವ ಪ್ರಕಾಶನ ಕಾಲ ಕನಸು, ನಂ.894, 1ನೇ ಮುಖ್ಯ ರಸ್ತೆ, ನಿಸರ್ಗ ಬಡಾವಣೆ, ಚಂದ್ರಾಲೇಔಟ್, ಬೆಂಗಳೂರು–560 072 (98450–5248)	448	360	ಪ್ರಾಚೀನ ಕರ್ನಾಟಕದ ಶಿಲ್ಪಿಗಳ ಜೀವನ ಚರಿತ್ರೆ ಮತ್ತು ಸಾಧನೆಯನ್ನು ಶೋಧಿಸಿ ಪುನರ್ ರೂಪಿಸುವ ಒಂದು ಮಹತ್ವದ ಕೃತಿ. ಉಪಲಬ್ಧವಿರುವ ಎಲ್ಲಾ ಮೂಲಗಳಿಂದ ಮಾಹಿತಿ ಸಂಗ್ರಹ ಮಾಡಿ ಸಾಂಗವಾದ ಅಧ್ಯಯನ ಮತ್ತು ವಿಶ್ಲೇಷಣೆಯ ಮೂಲಕ ಶಿಲ್ಪಿಗಳು ಮತ್ತು ಶಿಲ್ಪಕಲೆಯ ಚರಿತ್ರೆಯನ್ನು ಕಟ್ಟಿಕೊಡುವ ಈ ಕೃತಿ ಉನ್ನತ ಮಟ್ಟದ ಸಂಶೋಧನೆಗೆ ಮಾದರಿಯಾಗಿದೆ. 19 ಅಧ್ಯಾಯಗಳು ಅಗತ್ಯ ಅನುಬಂಧಗಳು, ಆಕರ ಸೂಚಿ, ಶಬ್ದ ಸೂಚಿಗಳನ್ನು ಒಳಗೊಂಡ ಅಚ್ಚುಕಟ್ಟಾದ ಅಧ್ಯಯನಕ್ಕೆ ನಿದರ್ಶನವಾಗಿದೆ. ಮೂರ್ತಿ ಶಿಲ್ಪ, ವಾಸ್ತುಶಿಲ್ಪದ ಛಾಯಾ ಚಿತ್ರಗಳಿವೆ; ಶಿಲ್ಪೋದ್ಯಾಯದಲ್ಲಿ ಬಳಸುವ ಉಪಕರಣಗಳ ಚಿತ್ರಗಳೂ ಇವೆ.	
105.	148	ಕನ್ನಡ ಸಾಹಿತ್ಯ ಪರಂಪರೆ	ಅಧ್ಯಯನ / ಸಾಹಿತ್ಯ ಚರಿತ್ರೆ	ಡಾ.ಪ್ರಸಾದಸ್ವಾಮಿ.ಎಸ್.	ಕಣ್ವ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ ನಂ.777, 7ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ನೆಲಮಹಡಿ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು–560 040 (9980021101)	384	200	ಪ್ರಾಚೀನ ಕಾಲದಿಂದ ಇಲ್ಲಿಯವರೆಗಿನ ಕನ್ನಡ ಸಾಹಿತ್ಯದ ಸ್ಥೂಲ ಸಮೀಕ್ಷೆ ಮತ್ತು ಚಾರಿತ್ರಿಕ ಕಾಲಾನುಕ್ರಮದ ನಿರೂಪಣೆ ಇಲ್ಲಿದೆ. ವಿದ್ಯಾರ್ಥಿಗಳಿಗೆ, ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಉಪಯುಕ್ತ. ಉದ್ದೇಶ–ವ್ಯಾಪ್ತಿ, ಲಂಕೇಶರ ಬಹುಮುಖ ಪ್ರತಿಭೆ, ಮನುಷ್ಯ ಪರಿಕಲ್ಪನೆಯಲ್ಲಿ ಆಧುನಿಕತೆ ಮತ್ತು ಸ್ತ್ರೀಪುರುಷ ಸಂಬಂಧಗಳು, ಅಭಿವ್ಯಕ್ತಿ ಕ್ರಮ, ಸಮಕಾಲೀನ ಸಾಹಿತ್ಯ – ತೌಲನಿಕ ಅಧ್ಯಯನ, ಗ್ರಾಮ ಸಮಾಜದ ಸ್ವರೂಪ, ಸಮಾರೋಪ – ಹೀಗೆ ಏಳು ಅಧ್ಯಾಯಗಳಲ್ಲಿ ಅಧ್ಯಯನ ನಿರೂಪಿತವಾಗಿದೆ.	

106.	149	ಲಂಕೇಶ್‌ರ ಕದಂಬರಿಗಳಲ್ಲಿ ಸಾಮಾಜಿಕ ಪ್ರಜ್ಞೆ–ಒಂದು ಅಧ್ಯಯನ	ಸಂಶೋಧನೆ – ಅಧ್ಯಯನ	ಡಾ.ಎಜಿ.ಶಿವಕುಮಾರ್	ಕಣ್ವ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ ನಂ.777, 7ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ನೆಲಮಹಡಿ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು–560 040 (9980021101)	200	140	ಪಿ.ಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ ಸಂಶೋಧನಾ ಪ್ರಬಂಧ ಲಂಕೇಶರ ಕಥಾ ಸಾಹಿತ್ಯವನ್ನು ಪ್ರಧಾನವಾಗಿಟ್ಟುಕೊಂಡು ತೇಜಸ್ವಿ ಹಾಗೂ ಅನಂತಮೂರ್ತಿ ಅವರ ಕಥಾ ಸಾಹಿತ್ಯವನ್ನು ಉಚಿತವಾದೆಡೆ ತುಲನಾತ್ಮಕವಾಗಿ ಅಧ್ಯಯನ ಮಾಡಿ ವಿವೇಚಿಸಿರುವ ಈ ಕೃತಿ ಅಧ್ಯಯನದ ಶಿಸ್ತು ಮತ್ತು ಪರಿಶ್ರಮಕ್ಕೆ ಹೊರತಾಗುವುದಿಲ್ಲ.	
